ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸ ಪತ್ರಿಕೆ

ಸಂಪುಟ : 4 । ಸಂಚಿಕೆ : 2 । ಫೆಬ್ರವರಿ : 2022 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ



## ರಾಷ್ಟ್ರಪಿತ ಮಹಾತ್ಮಾ ಗಾಂಧಿ ಅವರ ಆದರ್ಶಗಳು ದೇಶದ ಆಧಾರ ಸ್ತಂಭಗಳಾಗಿವೆ : ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ





## 2022ನೇ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧ ಚಿತ್ರ

# ಬ್ಯಾಂಕಿಂಗ್ ಕ್ಷೇತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೊಡುಗೆ ಅಪಾರ : ಸಚಿವ ಎಸ್.ಟಿ. ಸೋಮಶೇಖರ್






**ಮಂಗಳೂರು :** ಬ್ಯಾಂಕುಗಳ ತೊಟ್ಟಿಲು ಎಂದೇ ಗುರುತಿಸಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ತನ್ನದೇ ಆದ ಕೊಡುಗೆ ನೀಡುತ್ತಿದೆ ಎಂದು ಸಹಕಾರ ಸಚಿವರಾದ ಎಸ್.ಟಿ.ಸೋಮಶೇಖರ್ ಅವರ ಹೇಳಿದರು.

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘದ ಸ್ವಂತ ಕಟ್ಟಡ "ಆತ್ಮಶಕ್ತಿ ಸೌಧ"ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಹಕಾರ ಸಂಘಗಳು ಆರ್ಥಿಕ ವ್ಯವಹಾರದ ಜೊತೆಗೆ ಸಾಮಾಜಿಕ ಹೊಣೆಗಾರಿಕೆಯನ್ನು ಹೊತ್ತುಕೊಂಡು ಉತ್ತಮ ಸಮಾಜ ನಿರ್ಮಾಣದಲ್ಲಿ ಕೈಜೋಡಿಸುತ್ತಿರುವುದರಲ್ಲಿ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘವು ಮುಂಚೂಣಿಯಲ್ಲಿದೆ ಎಂದರು.

ಸಂಘ ಆರಂಭವಾದ ಹತ್ತು ವರ್ಷಗಳಲ್ಲಿ ಜಿಲ್ಲೆಯಾದ್ಯಂತ 20 ಶಾಖೆಗಳನ್ನು ತೆರೆದು 858 ಕೋಟಿ ರೂ.ಗೂ ಹೆಚ್ಚು ವ್ಯವಹಾರ ನಡೆಸುತ್ತಿರುವುದು ನಿಜಕ್ಕೂ ಶ್ಲಾಘನೀಯ. ಅದರಲ್ಲೂ 20 ಶಾಖೆಗಳಲ್ಲಿ ಮಹಿಳೆಯರೇ ಶಾಖಾ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಒಂದು ಸಹಕಾರ ಸಂಘದ ಎಲ್ಲಾ ಶಾಖೆಗಳಲ್ಲಿ ಮಹಿಳೆಯರೇ ಶಾಖಾ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಏಕೈಕ ಸಂಘ ಎಂದರೆ ಅದು ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘ ಎಂದು ಹೇಳಿದರು.

ಇದೇ ವೇಳೆ ಕೇಂದ್ರದ ಮಾಜಿ ಸಚಿವರಾದ ಜನಾರ್ದನ ಪೂಜಾರಿ ಅವರ ಶಿಸ್ತು ಮತ್ತು ಕಾರ್ಯವೈಖರಿಯನ್ನು ಸ್ಮರಿಸಿದ ಸಚಿವರು, ಕೇವಲ ಹತ್ತು ವರ್ಷದಲ್ಲಿ ಸಂಘ ಇಷ್ಟೊಂದು ಬೃಹದ್ಧಾಕಾರವಾಗಿ ಬೆಳೆಯಲು ಸಂಘದ ಆಡಳಿತ ಮಂಡಳಿಯ ಶ್ರಮ ಮತ್ತು ಶಿಸ್ತು ಕಾರಣವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಶಾಸಕ ಉಮನಾಥ ಕೋಟ್ಯಾನ್, ಬ್ಯಾಂಕಿನ ಅಧ್ಯಕ್ಷರಾದ ಚಿತ್ತರಂಜನ್ ಬೋಳಾರ್, ನಿರ್ದೇಶಕರು ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

## ಸಹಕಾರ ಕ್ಷೇತ್ರದ ವಿಶ್ವಾಸ ಹೆಚ್ಚಿಸಬೇಕಿದೆ - ಸಚಿವ ಎಸ್.ಟಿ. ಸೋಮಶೇಖರ್

**ಬೆಂಗಳೂರು :** ಸಹಕಾರ ಕ್ಷೇತ್ರದ ಬಗ್ಗೆ ವಿಶ್ವಾಸಾರ್ಹತೆ ಹೆಚ್ಚಿಸಲು ಅಗತ್ಯ ತಿದ್ದುಪಡಿಗಳನ್ನು ಬರುವ ಅಧಿವೇಶನದಲ್ಲಿ ಮಂಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಎಸ್.ಟಿ.ಸೋಮಶೇಖರ್ ಹೇಳಿದ್ದಾರೆ.

ಸಂಯುಕ್ತ ಸಹಕಾರಿ ವತಿಯಿಂದ ನಗರದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ ರಾಜ್ಯದಲ್ಲಿ ಈ ಕ್ಷೇತ್ರ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ವಿಚಾರದಲ್ಲಿ ಮುಂಚೂಣಿಯಲ್ಲಿದೆ. ಆದರೆ, ಒಂದೆರಡು ಸಂಸ್ಥೆಗಳು ಕೆಟ್ಟ ಕಾರ್ಯಗಳನ್ನು ಮಾಡಿದಾಗ ಇಡೀ ಸಹಕಾರಿ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರುತ್ತದೆ ಎಂದರು.

ಭ್ರಷ್ಟಚಾರ ಮಾಡಿದವರ ಮೇಲೆ ಕಠಿಣ ಶಿಕ್ಷೆ ಕೊಡುವ ಕಾನೂನು ತರಲಾಗುವುದು ಎಂದರು. ಈ ಕ್ಷೇತ್ರದಲ್ಲಿ ಸಾವಿರಾರು ಕೋಟಿ ರೂ. ಠೇವಣಿ ಹಣವಿದೆ. ಸಾವಿರಾರು ಕೋಟಿ ರೂ.ಸಾಲ ನೀಡಲಾಗಿದೆ. ಲಕ್ಷಾಂತರ ಜನರಿಗೆ ಉದ್ಯೋಗ ಕೊಟ್ಟಿರುವ ಈ ಕ್ಷೇತ್ರ ಇನ್ನಷ್ಟು ಉತ್ತಮ ಕಾರ್ಯ ಮಾಡುವ ಅಗತ್ಯವಿದೆ ಎಂದು ಸೋಮಶೇಖರ್ ಹೇಳಿದರು. ಸಚಿವ ಡಾ.ಸಿ.ಎನ್.ಅಶ್ವಥನಾರಾಯಣ ಮಾತನಾಡಿ, ಸಮಾಜದಲ್ಲಿ ಸಹಕಾರ ಕ್ಷೇತ್ರದಲ್ಲಿ ಪಾತ್ರ ಅತ್ಯಂತ ಮಹತ್ವದ್ದು. ಉಳ್ಳವರಿಂದ ಠೇವಣಿ ಸಂಗ್ರಹಿಸಿ ಇಲ್ಲದವರಿಗೆ ಆರ್ಥಿಕ ನೆರವು ನೀಡುವ ಮಹತ್ವದ ಕೆಲಸವನ್ನು ಈ ಸಹಕಾರ ಕ್ಷೇತ್ರ ಮಾಡುವುದರಿಂದ ಸಮಾಜದಲ್ಲಿ ದುರ್ಬಲವಾಗಿರುವವರ ಸಬಲೀಕರಣ ಮಾಡಿದಂತಾಗುತ್ತಿದೆ ಎಂದರು.

ಸಂಯುಕ್ತ ಸಹಕಾರಿ ಉಪಾಧ್ಯಕ್ಷ ಜಗದೀಶ ಕವಟಗಿಮಠ, ಸಂಸದ ಉಮೇಶ್ ಜಾಧವ್, ವಿಧಾನ ಪರಿಷತ್ ಸದಸ್ಯರಾದ ಅರುಣ ಶಹಾಪೂರ, ಪಟ್ಟಣ್ಣ ಆಯನೂರು ಮಂಜುನಾಥ ಮತ್ತಿತರರು ಉಪಸ್ಥಿತರಿದ್ದರು.

# ಬ್ಯಾಡ್ ಬ್ಯಾಂಕ್ ಆರಂಭಕ್ಕೆ ಅನುಮೋದನೆ ಪೂರ್ಣ




**ಮುಂಬೈ :** ಬ್ಯಾಡ್ ಬ್ಯಾಂಕ್ ಅಥವಾ ರಾಷ್ಟ್ರೀಯ ಆಸ್ತಿ ಪುನರ್ ರಚನಾ ಕಂಪನಿಯು (ಎನ್‌ಎಆರ್‌ಸಿಎಲ್) ಕಾರ್ಯಾಚರಣೆ ಆರಂಭಿಸಲು ಅಗತ್ಯವಿರುವ ಎಲ್ಲ ಅನುಮೋದನೆಗಳನ್ನು ಪಡೆದುಕೊಂಡಿದ್ದು, ಒಟ್ಟು 38 ಎನ್‌ಪಿಎ (ಅನುತ್ಪಾದಕ ಸಾಲ) ಖಾತೆಗಳು ಈ ಕಂಪನಿಗೆ ವರ್ಗಾವಣೆ ಆಗಲಿವೆ. ಇಷ್ಟು ಖಾತೆಗಳಲ್ಲಿನ ಸಾಲದ ಒಟ್ಟು ಮೊತ್ತವು ರೂ.82,845 ಕೋಟಿ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಅಧ್ಯಕ್ಷ ದಿನೇಶ್ ಖರಾ ಹೇಳಿದ್ದಾರೆ.

38 ಎನ್‌ಪಿಎ ಖಾತೆಗಳನ್ನು ಕಂಪನಿಗೆ ವರ್ಗಾವಣೆ ಮಾಡುವ ಪ್ರಕ್ರಿಯೆಯು ಹಂತ ಹಂತವಾಗಿ ನಡೆಯಲಿದೆ. ಮೊದಲ ಹಂತದಲ್ಲಿ ಮಾರ್ಚ್‌ಗೆ ಮುನ್ನ ಒಟ್ಟು 15 ಎನ್‌ಪಿಎ ಖಾತೆಗಳನ್ನು ಕಂಪನಿಗೆ ವರ್ಗಾವಣೆ ಮಾಡಲಾಗುತ್ತದೆ. ಇಷ್ಟು ಖಾತೆಗಳಲ್ಲಿನ ಸಾಲದ ಒಟ್ಟು ಮೊತ್ತವು ರೂ.50ಸಾವಿರ ಕೋಟಿ. ಇಂಡಿಯಾ ಡೆಟ್ ರೆಸಲ್ಯೂಷನ್ ಕಂಪನಿ ಲಿ., (ಐಡಿಆರ್‌ಸಿಎಲ್) ಕೂಡ ಕಾರ್ಯಾಚರಣೆ ಆರಂಭಿಸಲು ಅಗತ್ಯವಿರುವ ಅನುಮೋದನೆಗಳನ್ನು ಪಡೆದುಕೊಂಡಿದೆ ಎಂದು ಅವರು ತಿಳಿಸಿದ್ದಾರೆ. ಈ ಕಂಪನಿಯು ಅನುತ್ಪಾದಕ ಆಸ್ತಿಗಳನ್ನು ನಿರ್ವಹಿಸಲಿದ್ದು, ಇದಕ್ಕೆ ಮಾರುಕಟ್ಟೆ ತಜ್ಞರ ನೆರವು ಪಡೆಯಲಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2021–22ನೇ ಸಾಲಿನ ಬಜೆಟ್ ಭಾಷಣದಲ್ಲಿ ಬ್ಯಾಡ್ ಬ್ಯಾಂಕ್ ಆರಂಭಿಸುವ ಘೋಷಣೆ ಮಾಡಿದ್ದರು. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ಅಂದಾಜು ರೂ.2ಲಕ್ಷ ಕೋಟಿ ಮೊತ್ತದ ಅನುತ್ಪಾದಕ ಸಾಲದ ಸಮಸ್ಯೆಯನ್ನು ಬ್ಯಾಡ್ ಬ್ಯಾಂಕ್ ಮೂಲಕ ಇತ್ಯರ್ಥಪಡಿಸುವುದಾಗಿಯೂ ಅವರು ಹೇಳಿದ್ದರು.

ರೂ.2ಲಕ್ಷ ಕೋಟಿಯಲ್ಲಿ ಒಂದಿಷ್ಟು ಮೊತ್ತವು ಕಳೆದು ಒಂದು ವರ್ಷದ ಅವಧಿಯಲ್ಲಿ ಇತ್ಯರ್ಥ ಕಂಡಿದೆ ಎಂದು ಎಸ್‌ಬಿಐ ವ್ಯವಸ್ಥಾಪಕ ನಿರ್ದೇಶಕ ಜೆ. ಸ್ವಾಮಿನಾಥನ್ ಹೇಳಿದ್ದಾರೆ. ಎನ್‌ಎಆರ್‌ಸಿಎಲ್‌ನ ಬಹುಪಾಲು ಷೇರುಗಳನ್ನು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಹೊಂದಿವೆ. ಐಡಿಆರ್‌ಸಿಎಲ್‌ನ ಬಹುಪಾಲು ಷೇರುಗಳು ಖಾಸಗಿ ಬ್ಯಾಂಕ್‌ಗಳ ಕೈಯಲ್ಲಿ ಇವೆ.

## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org


## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

SAHAKARA VARTHA PATHRIKE KANNADA MONTHLY
RNI-REG NO : KARKAN/2018/75796
POST REG NO : KABGW-1816/2022-2024
POSTING DATE : 1 & 5. EVERY MONTH
POSTED AT : P/C RMS BHAVAN, BANGALORE PSO,
Blore-26 PUBLISHED ON : 31st of Previous Month

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಮಂಡಳಿ


ಶಿದ್ದನಗೌಡ ಸಂಣರಾಮನಗೌಡ
ಸಹಕಾರಿ ಪಿತಾಮಹ, ರಾಷ್ಟ್ರದ ಪ್ರಥಮ
ಕೃಷಿ ಪತ್ತಿನ ಸಹಕಾರ ಸಂಘದ ಸಂಸ್ಥಾಪಕರು


ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು


ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು


ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು


ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು


ಶ್ರೀ ವಿ. ರಾಜು
ನಿರ್ದೇಶಕರು


ಡಾ. ಸಂಜಯ ಹಂ. ಹೊಸಮಠ
ನಿರ್ದೇಶಕರು


ಶ್ರೀ ಎಂ.ಜಿ. ನರೇಂದ್ರ ಕುಮಾರ
ನಿರ್ದೇಶಕರು


ಶ್ರೀ ಡಿ. ಚನ್ನಯ್ಯ
ನಿರ್ದೇಶಕರು


ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು


ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು


ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಶ್ರೀ ಧರೇಪ್ಪ ಎಂ. ಅಲಗೂರ
ನಿರ್ದೇಶಕರು


ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು


ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು


ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು


ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು


ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು


ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು


ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು


ಶ್ರೀ ಕೆ.ಎಸ್.ಗುರುಪ್ರಸಾದ್
ಸಲಹೆಗಾರರು


ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

Printed at : Biligiri Printers
Chamrajpet, Bengaluru - 18.

## ಸಂಪಾದಕೀಯ



**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**
ಅಧ್ಯಕ್ಷರು

ಸಹಕಾರ ಸಂಸ್ಥೆಗಳ ನೌಕರ ವರ್ಗದವರಿಗೆ ತಾವು ಕೆಲಸ ಮಾಡುವ ಸಂಸ್ಥೆಗಳ ನೌಕರ ವರ್ಗದವಗೆ ತಾವು ಕೆಲಸ ಮಾಡುವ ಸಂಸ್ಥೆಗಳಿಂದ ಆರ್ಥಿಕ ನೆರವು ದೊರೆತರೆ ಮುಂಬರುವ ದಿನಗಳಲ್ಲಿ ತಮ್ಮದೇ ನಿವೇಶನ–ಮನೆ ಹೊಂದಲು, ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ. ರಾಜ್ಯದಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳ ಸ್ಥಾಪನೆಯ ಜೊತೆಗೆ ಬಡಾವಣೆಗಳನ್ನು ನಿರ್ಮಿಸಲು ಅಗತ್ಯವಿರುವ ಹಣ, ಸಂಪನ್ಮೂಲ ಭೂಮಿ ಖರೀದಿ ಅಥವಾ ಭೂ ಅಭಿವೃದ್ಧಿ ಪಡಿಸಿದ ಸಂಸ್ಥೆಗಳಿಂದ ಯಾವುದೇ ಕಾನೂನು ತೊಡಕು ಇರದಂತಹ ನಿವೇಶನಗಳನ್ನು ಖರೀದಿಸಲು ಸಹಕಾರ ಇಲಾಖೆ ಮತ್ತು ಸಂಬಂಧಪಟ್ಟ ಪ್ರಾಧಿಕಾರಗಳು ಏಕಗವಾಕ್ಷಿ ಯೋಜನೆಯ ಅಡಿಯಲ್ಲಿ ನೆರವು ನೀಡಲು ಮುಂದಾದರೆ ಕನಸು ನನಸಾಗಬಲ್ಲದು.

# ನೌಕರರು ಮತ್ತು ಗೃಹ ನಿರ್ಮಾಣ ಸಹಕಾರ ಸಂಘಗಳು

ರಾಜ್ಯದ ಸಹಕಾರ ಚಳುವಳಿ ದೇಶದ ಇತರೆ ರಾಜ್ಯಗಳಿಗೆ ಹೋಲಿಕೆ ಮಾಡಿದಾಗ ತೃಪ್ತಿದಾಯಕವಾಗಿದೆ. ಅಂದಾಜು 45 ಸಾವಿರ ಸಹಕಾರ ಸಂಘಗಳಲ್ಲಿ ನಾಲ್ಕು ಲಕ್ಷಕ್ಕೂ ಅಧಿಕ ನೌಕರ ವರ್ಗದವರಿದ್ದಾರೆ. 4500ಕ್ಕೂ ಅಧಿಕ ಪತ್ತಿನ ಸಹಕಾರ ಸಂಘಗಳು ಕ್ರಿಯಾಶೀಲವಾಗಿವೆ. ಪತ್ತಿನ ಸಹಕಾರ ಸಂಘಗಳು ನಗರ, ಪಟ್ಟಣ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಅದರಲ್ಲೂ ವಿಶೇಷವಾಗಿ ನೌಕರರ ಸಹಕಾರ ಸಂಘಗಳು ಹೆಚ್ಚು ಕ್ರಿಯಾಶೀಲವಾಗಿದ್ದು ನೌಕರರು ಸ್ವಂತ ಸೂರು ಕಟ್ಟಿಕೊಳ್ಳಲು ಗೃಹನಿರ್ಮಾಣ ಸಹಕಾರ ಸಂಘಗಳನ್ನು ಸ್ಥಾಪಿಸಲು ಅವಕಾಶಗಳು ಇವೆ.

ಸಹಕಾರ ಇಲಾಖೆಯು ಇತ್ತೀಚೆಗೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಸ್ಥಾಪಿಸಿ ಬಡಾವಣೆಗಳನ್ನು ನಿರ್ಮಿಸಿಕೊಳ್ಳಲು ಉತ್ತಮ ಅವಕಾಶ ಹಾಗೂ ಮಾರ್ಗಸೂಚಿಗಳನ್ನು ಒಳಗೊಂಡ ಸುತ್ತೋಲೆ ಹೊರಡಿಸಿರುವುದರಿಂದ ಸಹಕಾರ ಸಂಘಗಳ ನೌಕರರು ಕಡಿಮೆ ವೆಚ್ಚದಲ್ಲಿ ನಿವೇಶನ ಹೊಂದಲು ಸಾಧ್ಯವಾಗಲಿದೆ. ವಿಶೇಷವಾಗಿ ನೌಕರರು ಉತ್ತಮ ಸಂಬಳ ಪಡೆಯುತ್ತಿರುವ ಕಾರಣ ಆಸಕ್ತರು, ಸಮಾನ ಮನಸ್ಕರು ಸಂಘಗಳನ್ನು ಸ್ಥಾಪಿಸಿ ಸಂಘಗಳನ್ನು ಉಳಿಸಿ ಬೆಳೆಸಿ ಮುನ್ನಡೆಸಬಹುದಾಗಿದೆ.

ಸಹಕಾರ ಸಂಸ್ಥೆಗಳ ನೌಕರ ವರ್ಗದವರಿಗೆ ತಾವು ಕೆಲಸ ಮಾಡುವ ಸಂಸ್ಥೆಗಳ ನೌಕರ ವರ್ಗದವಗೆ ತಾವು ಕೆಲಸ ಮಾಡುವ ಸಂಸ್ಥೆಗಳಿಂದ ಆರ್ಥಿಕ ನೆರವು ದೊರೆತರೆ ಮುಂಬರುವ ದಿನಗಳಲ್ಲಿ ತಮ್ಮದೇ ನಿವೇಶನ–ಮನೆ ಹೊಂದಲು, ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ. ರಾಜ್ಯದಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳ ಸ್ಥಾಪನೆಯ ಜೊತೆಗೆ ಬಡಾವಣೆಗಳನ್ನು ನಿರ್ಮಿಸಲು ಅಗತ್ಯವಿರುವ ಹಣ ಸಂಪನ್ಮೂಲ, ಭೂಮಿ ಖರೀದಿ ಅಥವಾ ಭೂ ಅಭಿವೃದ್ಧಿ ಪಡಿಸಿದ ಸಂಸ್ಥೆಗಳಿಂದ ಯಾವುದೇ ಕಾನೂನು ತೊಡಕು ಇರದಂತಹ ನಿವೇಶನಗಳನ್ನು ಖರೀದಿಸಲು ಸಹಕಾರ ಇಲಾಖೆ ಮತ್ತು ಸಂಬಂಧಪಟ್ಟ ಪ್ರಾಧಿಕಾರಗಳು ಏಕಗವಾಕ್ಷಿ ಯೋಜನೆಯ ಅಡಿಯಲ್ಲಿ ನೆರವು ನೀಡಲು ಮುಂದಾದರೆ ಕನಸು ನನಸಾಗಬಲ್ಲದು.

ಇದಕ್ಕೆ ನೌಕರ ವರ್ಗದವರು ಸಂಘಟನಾತ್ಮಕವಾಗಿ ಸಂಘಗಳನ್ನು ರೂಪಿಸಿ ಸೌಲಭ್ಯಗಳನ್ನು ಪಡೆದುಕೊಳ್ಳಲು ಮೂಲಭೂತ ಸೌಕರ್ಯಗಳ ಜೊತೆ ಸುಖೀಜೀವನ ನಡೆಸಲು ಇಚ್ಛಾಶಕ್ತಿ, ಬದ್ಧತೆಯನ್ನು ತೋರಬೇಕು. ಆಗ ಮಾತ್ರ ಸಹಕಾರ ತತ್ವಗಳ ಅಡಿಯಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳು ನೌಕರರ ಆಶಯಗಳನ್ನು ಪೂರೈಸಲು ಸಾಧ್ಯವಾಗುತ್ತದೆ.

ಸಹಕಾರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ನೌಕರರೇ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ತಮ್ಮ ಸೇವಾ ಅನುಭವದ ಮೇಲೆ ಮುನ್ನಡೆಸಲು ಸಾಧ್ಯವಿರುವ ಹಿನ್ನೆಲೆಯಲ್ಲಿಯೂ ಗೃಹ ನಿರ್ಮಾಣ ಸಹಕಾರ ಸಂಘಗಳು ಬಲಗೊಂಡು ಚಳುವಳಿಯನ್ನು ಪರಿಣಾಮಕಾರಿಯಾಗಿ ಬಲಪಡಿಸಲು ಅವಕಾಶಗಳು ಇರುತ್ತವೆ. ಈ ಬಗ್ಗೆ ನೌಕರರು ಯೋಚಿಸಿ ಮುಂದಾದರೆ ಯಶಸ್ಸು ಸಾಧ್ಯ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ಮಹಾತ್ಮಾ ಗಾಂಧೀಜಿ ಪುಣ್ಯ ಸ್ಮರಣೆ : ಹುತಾತ್ಮರ ದಿನಾಚರಣೆ



**ಬೆಂಗಳೂರು :** ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಆದರ್ಶಗಳು ಸ್ವತಂತ್ರ ಹಾಗೂ ಗಣತಂತ್ರ ಭಾರತದ ಆಧಾರಸ್ಥಂಭಗಳಾಗಿವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅವರು ಜನವರಿ 30 ರಂದು ಹುತಾತ್ಮರ ದಿನಾಚರಣೆಯ ಅಂಗವಾಗಿ ಮಹಾತ್ಮಾ ಗಾಂಧೀಜಿಯವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿ ಮಹಾತ್ಮಾ ಗಾಂಧೀಜಿಯವರು ತಮ್ಮ ಪ್ರಾಣವನ್ನು ಬಲಿದಾನ ಮಾಡಿದ ದಿನವನ್ನು ಹುತಾತ್ಮರ ದಿನವನ್ನಾಗಿ ಆಚರಿಸುತ್ತೇವೆ. ನನ್ನ ಜೀವನವೇ ಒಂದು ಸಂದೇಶ ಎಂದ ಅವರು, ತಮ್ಮ ಆತ್ಮ ಚರಿತ್ರೆ ಸತ್ಯಾನ್ವೇಷಣೆಯ ಮಾತನ್ನು ಹೇಳಲು ನೈತಿಕವಾಗಿ ಬಹಳ ದೊಡ್ಡ ಶಕ್ತಿ ಇರಬೇಕು.

ಅಂಥಹ ವ್ಯಕ್ತಿಗಳು ಮಾತ್ರ ಇದನ್ನು ಹೇಳಲು ಸಾಧ್ಯ. ಅವರ ಜೀವನ ಅತ್ಯಂತ ಪರಿಶುದ್ಧ ಹಾಗೂ ಸತ್ಯದಿಂದ ಕೂಡಿರುವಂಥದ್ದು. ರಾಷ್ಟ್ರಪಿತ ಮಹಾತ್ಮಾ ಗಾಂಧಿ ಹೀಗಾಗಿಯೇ ಅತ್ಯಂತ ಆದರ್ಶಪ್ರಾಯವಾಗಿದ್ದರೆ ಎಂದರು.

**ಸುಭಾಷಿತ :** ಉತ್ತಮ ಪ್ರಯತ್ನ ಯಾವತ್ತೂ ವ್ಯರ್ಥವಾಗುವುದಿಲ್ಲ. ನಿಮ್ಮ ಕೆಲಸವನ್ನು ನೀವು ಪ್ರಾಮಾಣಿಕವಾಗಿ ಮಾಡಿ. ಪ್ರತಿಫಲ ತಾನಾಗಿಯೇ ನಿಮ್ಮನ್ನು ಹುಡುಕಿಕೊಂಡು ಬರುತ್ತದೆ. – ಡಾ. ರಾಜ್‌ಕುಮಾರ್

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಪ್ಯಾಕ್ಸ್‌ಗಳನ್ನು ಬಹುಸೇವಾ ಕೇಂದ್ರಗಳನ್ನಾಗಿಸಲು 302 ಕೋಟಿ ರೂ. ಮಂಜೂರು

## ಕೃಷಿ ಸಾಲ ವಿತರಣೆಯಲ್ಲಿ ಶೇ.68.18 ಪ್ರಗತಿ : ಸಚಿವ ಎಸ್.ಟಿ. ಸೋಮಶೇಖರ್



**ಬೆಂಗಳೂರು :** 2021–22ನೇ ಸಾಲಿನಲ್ಲಿ ಕೃಷಿ ಸಾಲ ವಿತರಣೆಯಲ್ಲಿ ಶೇ.68.18ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ.

ಬೆಂಗಳೂರಿನ ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿ ಜನವರಿ 24 ರಂದು ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಈಗಾಗಲೇ ಡಿಸೆಂಬರ್ 31 ರವರೆಗೆ 19.27 ಲಕ್ಷ ರೈತರಿಗೆ 13295 ಕೋಟಿ ರೂ. ಬೆಳೆ ಸಾಲ ಹಾಗೂ 31 ಸಾವಿರ ರೈತರಿಗೆ ರೂ. 893 ಕೋಟಿ ಮಧ್ಯಮಾವಧಿ/ದೀರ್ಘಾವಧಿ ಸಾಲವನ್ನು ನೀಡಿದ್ದು, ಒಟ್ಟಾರೆ 19.58 ಲಕ್ಷ ರೈತರಿಗೆ 14188 ಕೋಟಿ ರೂ. ಕೃಷಿ ಸಾಲ ವಿತರಿಸಿ ಶೇ. 68.18 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದರು. ಮಾರ್ಚ್ ಅಂತ್ಯದ ವೇಳೆಗೆ 2021–22ನೇ ಸಾಲಿನ ಗುರಿಯಂತೆ 30.86 ಲಕ್ಷ ರೈತರಿಗೆ ಒಟ್ಟು 20810 ಕೋಟಿ ರೂ. ಸಾಲ ವಿತರಿಸಲು ಡಿಸಿಸಿ ಬ್ಯಾಂಕುಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ. ಕಳೆದ ಸಾಲಿನಲ್ಲಿ ಕೃಷಿ ಉದ್ದೇಶಗಳಿಗೆ ನೀಡಿದ್ದ ಸಾಲ ವಿತರಣೆಯಲ್ಲಿ ಪ್ಯಾಕ್ಸ್‌ಗಳು ಮತ್ತು ಡಿಸಿಸಿ ಬ್ಯಾಂಕುಗಳ ಅಲ್ಪಾವಧಿ ಮತ್ತು ಮಧ್ಯಮಾವಧಿ ವಸೂಲಾತಿಯಲ್ಲಿ ಕ್ರಮವಾಗಿ ಶೇಕಡಾ 94.93 ಹಾಗೂ ಶೇ. 76.29 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಪತ್ರಕರ್ತರ ಪ್ರಶ್ನೆಗಳಿಗೆ ಮಾಹಿತಿ ನೀಡಿದರು.

**ಆತ್ಮನಿರ್ಭರ ಭಾರತ ಯೋಜನೆ :** ಕೇಂದ್ರ ಸರ್ಕಾರದ ಆತ್ಮನಿರ್ಭರ ಭಾರತ ಯೋಜನೆಯಡಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಬಹುಸೇವಾ ಕೇಂದ್ರಗಳನ್ನಾಗಿಸುವ ಉದ್ದೇಶದಿಂದ 1000 ಪ್ಯಾಕ್ಸ್‌ಗಳನ್ನು ಗುರುತಿಸಲಾಗಿದ್ದು, ಇದರಲ್ಲಿ ನಬಾರ್ಡ್ ಗುರುತಿಸಿರುವ 873 ಸಂಘಗಳಿಗೆ 302 ಕೋಟಿ ರೂ. ಸಾಲ ಮಂಜೂರು ಮಾಡಲಾಗಿದೆ. ಈ ಪೈಕಿ ಡಿಸಿಸಿ ಬ್ಯಾಂಕುಗಳು 581 ಪ್ಯಾಕ್ಸ್‌ಗಳಿಗೆ 72.73 ಕೋಟಿ ರೂ. ಬಿಡುಗಡೆ ಮಾಡಿರುತ್ತವೆ ಎಂದು ಸಚಿವರು ತಿಳಿಸಿದರು.

**ಕೃಷಿ ಅಡಮಾನ ಸಾಲ ವಿತರಣೆ :** ಪ್ಯಾಕ್ಸ್‌ಗಳು ಮತ್ತು ಪ್ರಾಥಮಿಕ ಕೃಷಿ ಮಾರುಕಟ್ಟೆ ಸಹಕಾರ ಸಂಘಗಳು ರೈತರ ಬೆಳೆದ ಕೃಷಿ ಉತ್ಪನ್ನಗಳನ್ನು ತಮ್ಮ ಗೋದಾಮುಗಳಲ್ಲಿ ಶೇಖರಣೆ ಮಾಡಿ ಉತ್ಪನ್ನಗಳ ಆಧಾರದ ಮೇಲೆ ಶೇಕಡಾ 7ರ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ 18958 ರೈತರಿಗೆ 306 ಕೋಟಿ ಸಾಲ ವಿತರಣೆ ಮಾಡಲಾಗಿದ್ದು, ನೆರವು ಕೇಳಿ ಬರುವ ರೈತರಿಗೆ ಈ ಯೋಜನೆಯ ಪ್ರಯೋಜನಗಳನ್ನು ತಲುಪಿಸುವಂತೆ ಇಲಾಖಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ವಿವರಿಸಿದರು.

**ಫ್ರೂಟ್ಸ್ ತಂತ್ರಾಂಶ :** ರೈತರಿಗೆ ತ್ವರಿತವಾಗಿ ಸಾಲ ದೊರೆಯಲು ಅನುಕೂಲವಾಗಲು ಇ–ಆಡಳಿತ ಇಲಾಖೆಯ FRUITS ತಂತ್ರಾಂಶ ಬಳಸಿ ಆನ್‌ಲೈನ್ ಮೂಲಕ ಪಹಣಿ ಆಧಾರದ ಮೇಲೆ ಸಾಲದ ಋಣವನ್ನು ದಾಖಲಿಸುವ ಬಗ್ಗೆ ಯೋಜನೆಯನ್ನು ರೂಪಿಸಲಾಗಿದೆ. ಪ್ಯಾಕ್ಸ್, ಡಿಸಿಸಿ ಬ್ಯಾಂಕ್ ಶಾಖೆಗಳು ಮತ್ತು ಪಿಕಾರ್ಡ್ ಬ್ಯಾಂಕುಗಳಲ್ಲಿ ರೈತರು ಕೃಷಿ ಸಾಲ ಪಡೆಯಲು ಸಾಲದ ಮೇಲಿನ ಋಣವನ್ನು ಪಹಣಿಯಲ್ಲಿ ದಾಖಲಿಸಲು ಮತ್ತು ಸಾಲ ತೀರುವಳಿ ಮಾಡಿದಾಗ ಬಿಡುಗಡೆ ಪತ್ರ ಪಡೆಯಲು ರೈತರು ಖುದ್ದಾಗಿ ಉಪನೋಂದಣಾಧಿಕಾರಿಗಳ ಕಚೇರಿಗೆ ದಾಖಲೆ ಸಲ್ಲಿಸಬೇಕಿತ್ತು. ಪ್ರಸ್ತುತ ಈ ವ್ಯವಸ್ಥೆಯನ್ನು FRUITS ತಂತ್ರಾಂಶ ಬಳಸಿ ಆನ್‌ಲೈನ್ ಮಾಡಲಾಗಿದೆ. ಈ ಯೋಜನೆಯು ಏಪ್ರಿಲ್ 2022 ರಿಂದ ಪೂರ್ಣ ಪ್ರಮಾಣದಲ್ಲಿ ಆನ್‌ಲೈನ್ ಮೂಲಕವೇ ದಾಖಲೆ ಸಲ್ಲಿಸಲು ಸಿದ್ದತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂಬ ಮಾಹಿತಿಯನ್ನು ನೀಡಿದರು.

**ಪಟ್ಟಣ ಸಹಕಾರ ಬ್ಯಾಂಕುಗಳು :** ರಾಜ್ಯದಲ್ಲಿ 264 ಪಟ್ಟಣ ಸಹಕಾರ ಬ್ಯಾಂಕುಗಳು 1122 ಶಾಖೆಗಳನ್ನು ಹೊಂದುವುದರ ಮೂಲಕ ಸೇವೆ ನೀಡುತ್ತಿವೆ. ಈ ಬ್ಯಾಂಕುಗಳು 45580 ಕೋಟಿ ರೂ. ಠೇವಣಾತಿ, 52594 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿದ್ದು ಸದಸ್ಯರಿಗೆ 29219.38 ಕೋಟಿ ರೂ. ಸಾಲ ಮತ್ತು ಮುಂಗಡಗಳನ್ನು ನೀಡಿದ್ದು, ದಿನಾಂಕ: 31.3.2021ಕ್ಕೆ 301.34 ಕೋಟಿ ಲಾಭ ಗಳಿಸಿವೆ ಎಂದು ಸಚಿವರು ತಿಳಿಸಿದರು. ಪತ್ರಿಕಾ ಗೋಷ್ಠಿಗೂ ಮುನ್ನ ಸಹಕಾರ ಸಚಿವರು ಸಹಕಾರ ಇಲಾಖೆಯ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಸಹಕಾರ ಸಂಘಗಳ ನಿಬಂಧಕರಾದ ಎಸ್. ಜಿಯಾಉಲ್ಲಾ, ಸಹಕಾರ ಸಂಘಗಳ ಅಪರ ನಿಬಂಧಕರುಗಳಾದ ಕೆ.ಎಸ್. ನವೀನ್, ಎ.ಸಿ. ದಿವಾಕರ್, ವೈ.ಹೆಚ್. ಗೋಪಾಲಕೃಷ್ಣ, ಕೆ.ಎಂ. ಆಶಾ, ಸಹಕಾರ ಸಂಘಗಳ ಬೆಂಗಳೂರು ಪ್ರಾಂತದ ಜಂಟಿ ನಿಬಂಧಕರಾದ ಅಶ್ವತ್ಥನಾರಾಯಣ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಹಕಾರಿ ಕೃಷಿ ಸಾಲ ವ್ಯವಸ್ಥೆಗೆ ನೂತನ ಆಯಾಮ
# ರಾಜ್ಯದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣ
# ವ್ಯವಹಾರ, ಕಾರ್ಯವೈಖರಿಯಲ್ಲಿ ಸುಧಾರಣೆ ಪ್ರಯತ್ನ




**ಬೆಂಗಳೂರು** : ಕರ್ನಾಟಕ ರಾಜ್ಯದಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗಣಕೀಕರಣಗೊಳಿಸುವ ಮೂಲಕ ಸಹಕಾರ ಸಂಘಗಳ ವ್ಯವಹಾರಗಳನ್ನು ಹಾಗೂ ಕಾರ್ಯವೈಖರಿಯಲ್ಲಿ ಸುಧಾರಣೆಯನ್ನು ತರುವುದು ಹಾಗೂ ಮುಂದಿನ ದಿನಗಳಲ್ಲಿ ಕಾಗದರಹಿತ ಮತ್ತು ಪರಿಸರಸ್ನೇಹಿ ವ್ಯವಸ್ಥೆಯನ್ನು ರೂಪಿಸುವುದು ಮುಖ್ಯ ಉದ್ದೇಶವಾಗಿರುತ್ತದೆ.

ರಾಜ್ಯದಲ್ಲಿನ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗಣಕೀಕರಣಗೊಳಿಸುವ ದಿಸೆಯಲ್ಲಿ ಚಿಂತನೆ ನಡೆದಿದೆ. ಪ್ರಸ್ತುತ ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳನ್ನು ಸಂಪೂರ್ಣವಾಗಿ ಗಣಕೀಕರಣಗೊಳಿಸಲಾಗಿರುತ್ತದೆ. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ ಟಾಟಾ ಸಲಹಾ ಸೇವೆ ಮತ್ತಿತರ ಸಂಸ್ಥೆಗಳ ಸೇವೆಯನ್ನು ಪಡೆಯಲಾಗಿದೆ.

ಪ್ರಸ್ತುತ ರಾಜ್ಯದಲ್ಲಿ ಒಟ್ಟು 5662 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿದ್ದು, ಈಗಾಗಲೇ 2079 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸಂಪೂರ್ಣವಾಗಿ ಗಣಕೀಕರಣ ಹೊಂದಿವೆ. ಉಳಿದ 3583 ಪ್ಯಾಕ್ಸ್‌ಗಳು ಗಣಕೀಕರಣಕ್ಕೆ ಬಾಕಿ ಇವೆ.

ಗಣಕೀಕರಣಗೊಂಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಡಿ.ಸಿ.ಸಿ. ಬ್ಯಾಂಕುಗಳೊಂದಿಗೆ ಗಣಕೀಕರಣದ ಕಾರ್ಯಾಚರಣೆಯ ಸಂಪರ್ಕವನ್ನು ಬೆಳಗಾವಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ, ದಾವಣಗೆರೆ ಮತ್ತು ಬೀದರ್ ಡಿ.ಸಿ.ಸಿ. ಬ್ಯಾಂಕುಗಳಲ್ಲಿ ಪ್ರಕ್ರಿಯೆಯಲ್ಲಿರುತ್ತವೆ.

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಅಪೆಕ್ಸ್ ಬ್ಯಾಂಕಿನೊಂದಿಗೆ ಗಣಕೀಕರಣ ಕಾರ್ಯಾಚರಣೆಯ ಸಂಪರ್ಕವನ್ನು ಅಥವಾ ಮಾಹಿತಿ ವೀಕ್ಷಿಸುವ ಅವಕಾಶವನ್ನು ಹೊಂದಿರುವುದಿಲ್ಲ.

ಆದರೆ, 2021-22ನೇ ಸಾಲಿನ ಆಯ-ವ್ಯಯದಲ್ಲಿ 5511 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವಲ್ಲಿ ರೂ. 198.00 ಕೋಟಿಗಳ ವೆಚ್ಚದಲ್ಲಿ ಗಣಕೀಕರಣಗೊಳಿಸುವ ಹೊಸ ಯೋಜನೆಯನ್ನು ಘೋಷಣೆ ಮಾಡಲಾಗಿರುತ್ತದೆ.

ಇತ್ತೀಚೆಗೆ ಸರ್ಕಾರದ ನಿರ್ಧಾರದಂತೆ ರಾಜ್ಯದ ಪ್ಯಾಕ್ಸ್‌ಗಳ ಗಣಕೀಕರಣಕ್ಕೆ ಭಾರತ ಸರ್ಕಾರ ಶೇ. 60 ಮತ್ತು ಉಳಿದ ಶೇ. 40 ಮೊತ್ತವನ್ನು ಆಯಾ ರಾಜ್ಯ ಸರ್ಕಾರ / ಡಿಸಿಸಿ / ರಾಜ್ಯ ಸಹಕಾರ ಬ್ಯಾಂಕುಗಳು Cost Sharing Patternನಲ್ಲಿ ಗಣಕೀಕರಣಗೊಳಿಸಲು ತಿಳಿಸಿರುತ್ತಾರೆ. ಕರ್ನಾಟಕ ಸರ್ಕಾರದ ನಡವಳಿಗಳ ಆದೇಶ ಸಂ. ಸಿಒ:145:ಸಿಎಲ್‌ಎಸ್ 2021 (ಭಾಗ), ಬೆಂಗಳೂರು, ದಿನಾಂಕ: 29.06.2021 ರಂತೆ ರಾಜ್ಯದಲ್ಲಿನ ಪ್ಯಾಕ್ಸ್‌ಗಳ ಗಣಕೀಕರಣಕ್ಕಾಗಿ ಕೇಂದ್ರ ಸರ್ಕಾರವು ರೂಪಿಸಿರುವ ಯೋಜನೆಯನ್ನು ಅಳವಡಿಸಿ ಕೊಳ್ಳಲು ತೀರ್ಮಾನವಾಗಿರುತ್ತದೆ. ಇದರ ಹಿನ್ನೆಲೆಯಲ್ಲಿ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ನೇತೃತ್ವದ ನಿಯೋಗ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಪ್ರಕ್ರಿಯೆಯ ವಿವರಗಳನ್ನು ನೀಡಿರುತ್ತಾರೆ.

# ದೆಹಲಿಯ ರಾಜಪಥದಲ್ಲಿ ರಾರಾಜಿಸಿದ ಕರ್ನಾಟಕದ ಕಲಾವೈಭವ

73ನೇ ಗಣರಾಜ್ಯೋತ್ಸವದ ನಿಮಿತ್ತ ದೆಹಲಿಯಲ್ಲಿ ಪ್ರತಿವರ್ಷದಂತೆ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು. ರಾಷ್ಟ್ರಪತಿ ಕೋವಿಂದ್ ಧ್ವಜಾರೋಹಣ ಮಾಡಿ ದೇಶದ ಬಗ್ಗೆ ಮಾತನಾಡಿದರು. ಪ್ರಧಾನಿ ನರೇಂದ್ರ ಮೋದಿ ಕೂಡ ದೇಶದ ಬಗ್ಗೆ ಭಾಷಣ ಮಾಡಿದರು. ಇನ್ನು ಎಲ್ಲ ಪಕ್ಷದ ಹಲವು ನಾಯಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಇದೇ ವೇಳೆ ಟ್ಯಾಬ್ಲೋ ಶೋ ಮಾಡಲಾಯಿತು. ದೇಶದ ನಾನಾ ರಾಜ್ಯಗಳು, ತಮ್ಮ ತಮ್ಮ ರಾಜ್ಯಗಳ ಟ್ಯಾಬ್ಲೋ ಶೋ ನಡೆಸಿಕೊಟ್ಟವು. ಕರ್ನಾಟಕದ ಟ್ಯಾಬ್ಲೋ ಶೋನಲ್ಲಿ ಯಕ್ಷಗಾನ, ವಿಜಯನಗರದ ವೈಭವ, ಇಳಕಲ್ ಸೀರೆ ಜೊತೆಗೆ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಪ್ರತಿಮೆಯನ್ನು ತೋರಿಸಲಾಯಿತು. ಈ ವೇಳೆ ಹೊನ್ನ ಬಾಗೀಣದಾಗ ಎಂಬ ಸಂಗೀತಕ್ಕೆ ಕಲಾವಿದರು ನೃತ್ಯ ಪ್ರದರ್ಶಿಸಿದರು. ಅಲ್ಲದೇ ರಾವಣನ ಗೊಂಬೆ ಯಕ್ಷಗಾನದ ಗೊಂಬೆಯೊಂದಿಗೆ ಪಪ್ಪೆಟ್ ಶೋ ಸೆಟ್ಟಿಂಗ್ ಕೂಡ ಮಾಡಲಾಗಿತ್ತು.



ಜೊತೆಗೆ ಹನುಮಂತನ ಪ್ರತಿಮೆ, ಆನೆಯ ಪ್ರತಿಮೆ ಕೂಡ ಇದ್ದು ಮಣ್ಣಿನ ಕರಕುಶಲ ವಸ್ತುಗಳ ಪ್ರದರ್ಶನ ಮಾಡಲಾಯಿತು. ದೆಹಲಿಯ ರಾಜಪಥದಲ್ಲಿ ಕರ್ನಾಟಕದ ಕಲಾವೈಭವ ರಾರಾಜಿಸಿತ್ತು. ಹಂಪಿಯ ವೈಭೋಗ ಎಲ್ಲರ ಕಣ್ಮನ ಸೆಳೆಯಿತು. ಇನ್ನು ಕಾರ್ಯಕ್ರಮದಲ್ಲಿ 99 ಸಿ.ಆರ್.ಪಿ.ಎಫ್ ಯೋಧರು ಪರೇಡ್ ನಡೆಸಿದರು. ಆಕಾಶದಲ್ಲಿ ತ್ರಿವರ್ಣ ತೋರಿಸಿದ ರೀತಿ ಅದ್ಭುತವಾಗಿತ್ತು.

# ಕೋವಿಡ್ ನಿರ್ವಹಣೆ ಬಗ್ಗೆ ರಾಜ್ಯಪಾಲರ ಮೆಚ್ಚುಗೆ
# ಗಣರಾಜ್ಯೋತ್ಸವ ದಿನಾಚರಣೆ : ಅಭಿವೃದ್ಧಿ ಕಾರ್ಯಗಳ ವಿವರಣೆ



**ಬೆಂಗಳೂರು** : ಕೊರೋನಾ ವಿರುದ್ಧದ ಹೋರಾಟದಲ್ಲಿ ರಾಜ್ಯ ಯಶಸ್ವಿಯಾಗಿದ್ದು, ಕೋವಿಡ್ ನಿರ್ವಹಣೆಯಲ್ಲಿ ದೇಶದಲ್ಲೇ ಮೊದಲ ಸ್ಥಾನ ಪಡೆದುಕೊಂಡಿದೆ. ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಒಳಗಾದ ಕಾರ್ಮಿಕರಿಗೆ 236 ಕೋಟಿ ರೂ. ಹಾಗೂ ಅಸಂಘಟಿತ ಕಾರ್ಮಿಕರಿಗೆ 628 ಕೋಟಿ ರೂ. ಪರಿಹಾರ ನೀಡಲಾಗಿದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಹೇಳಿದರು. ಬೆಂಗಳೂರಿನ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ 73ನೇ ಗಣರಾಜ್ಯೋತ್ಸವ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಕೋವಿಡ್, ನೀರಾವರಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ರಾಜ್ಯ ಸರ್ಕಾರ ಮಾಡಿರುವ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಾಡಿನಲ್ಲಿ ಜಲಾನಯನ ಅಭಿವೃದ್ಧಿಗೆ ಸರ್ಕಾರ ಗಮನ ಹರಿಸಿದೆ. 2021 ಆಗಸ್ಟ್‌ನಲ್ಲಿ ಕೃಷ್ಣಾ ನದಿಯ ಇಂಡಿ ಶಾಖೆಯಿಂದ ಸಿಂದಗಿ ಪಟ್ಟಣಕ್ಕೆ ಕುಡಿಯುವ ನೀರನ್ನು ಒದಗಿಸಲು ರೂ. 27.10 ಕೋಟಿ ವೆಚ್ಚ ಮಾಡಲಾಗಿದೆ ಎಂದರು.

ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ 158.27 ಕಿ.ಮೀ. ಮಾರ್ಗವನ್ನು ಒಳಗೊಂಡ 77 ರಸ್ತೆಗಳನ್ನು ವೈಟ್ ಟಾಪಿಂಗ್‌ಗಾಗಿ ಆಯ್ಕೆ ಮಾಡಲಾಗಿದೆ. ಈ ಪೈಕಿ 83.91 ಕಿ.ಮೀ. ರಸ್ತೆಯ ಕಾಮಗಾರಿ ಪೂರ್ಣಗೊಂಡಿದ್ದು, 31 ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಲಭ್ಯ ಗೊಳಿಸಲಾಗಿದೆ. ಮೊದಲ ಹಂತದಲ್ಲಿ 17 ಕಿ.ಮೀ. ಮಾರ್ಗದ 12 ರಸ್ತೆಗಳು ಮತ್ತು 2ನೇ ಹಂತದಲ್ಲಿ 16 ಕಿ.ಮೀ. ಮಾರ್ಗದ 35 ರಸ್ತೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು. ಮೆಟ್ರೋ ಯೋಜನೆಯಡಿ ಮೈಸೂರು ರಸ್ತೆಯಿಂದ ಕೆಂಗೇರಿವರೆಗಿನ 7.53 ಕಿ.ಮೀ. ಉದ್ದದ ಮಾರ್ಗವನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಗಿದೆ. ಹಾಗೆಯೇ ಬೆಳ್ಳಂದೂರು ಮತ್ತು ವರ್ತೂರು ಕೆರೆಗಳಲ್ಲಿನ ಮಾಲಿನ್ಯವನ್ನು ನಿರ್ಮೂಲನ ಮಾಡಲು ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಗಳಲ್ಲಿ ತ್ಯಾಜ್ಯ ನೀರು ಶುದ್ಧೀಕರಣ ಘಟಕವನ್ನು ಮೇಲ್ದರ್ಜೆಗೇರಿಸಲಾಗಿದೆ ಎಂದರು.

# ‘ಮುಖ್ಯಮಂತ್ರಿಗಳ ಮಹತ್ವಾಕಾಂಕ್ಷಿ ಗ್ರಾಮ ಒನ್ ಯೋಜನೆ’



## ‘3026 ಗ್ರಾಮ ಪಂಚಾಯಿತಿಗಳಲ್ಲಿ ಆರಂಭ’
## ‘ಮಾರ್ಚ್ ಅಂತ್ಯದೊಳಗೆ ರಾಜ್ಯಾದ್ಯಂತ ವಿಸ್ತರಣೆ’

ಹಾವೇರಿ ಜಿಲ್ಲೆ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಯೋಜನೆ ಉದ್ಘಾಟನಾ ಸಮಾರಂಭ ಸಂದರ್ಭದಲ್ಲಿ ಗ್ರಾಮಸ್ಥರಿಂದ ಅರ್ಜಿ ಸ್ವೀಕರಿಸಿ ಆಯುಷ್ಮಾನ್ ಭಾರತ ಆರ್.ಟಿ.ಸಿ ಸಂಧ್ಯಾ ಸುರಕ್ಷಾ ಕಾರ್ಡ್, ರಹವಾಸಿ ಪ್ರಮಾಣ ಪತ್ರ ಮುಂತಾದ ಪ್ರಮಾಣಪತ್ರಗಳನ್ನು ವಿತರಣೆ ಮಾಡಲಾಯಿತು. ತಕ್ಷಣವೇ ಪ್ರಮಾಣಪತ್ರ ವಿತರಿಸಲು ವ್ಯವಸ್ಥೆ ಮಾಡಿಕೊಂಡಿದ್ದ ಇ ಆಡಳಿತ ಇಲಾಖೆ ಅಧಿಕಾರಿಗಳ ಕಾರ್ಯವನ್ನು ಸಿಎಂ ಬೊಮ್ಮಾಯಿ ಶ್ಲಾಘಿಸಿದರು.

**ಬೆಂಗಳೂರು :** ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಗ್ರಾಮ ಒನ್ ಯೋಜನೆ ಕಳೆದ ವಾರ ರಾಜ್ಯದ 3026 ಗ್ರಾಮ ಪಂಚಾಯಿತಿಗಳಲ್ಲಿ ಆರಂಭವಾಗಿದೆ. ಮಾರ್ಚ್ ಅಂತ್ಯದೊಳಗೆ ಈ ಯೋಜನೆಯನ್ನು ರಾಜ್ಯಾದಾದ್ಯಂತ ವಿಸ್ತರಣೆ ಮಾಡುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಅವರು ವರ್ಚುಯಲ್ ಕಾರ್ಯಕ್ರಮದಲ್ಲಿ ಸಸಿಗೆ ನೀರು ಹಾಕುವ ಮೂಲಕ ರಾಜ್ಯದ 12 ಜಿಲ್ಲೆಗಳಲ್ಲಿ ಗ್ರಾಮ ಒನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

**"ಜನರ ಸಮಯ ಹಾಗೂ ಹಣ ಉಳಿಸುವ ಗ್ರಾಮ ಒನ್" :** ಸರ್ಕಾರದ ಸೌಲಭ್ಯ ಪಡೆಯಲು ಜನರು ಸಮಯ ಹಾಗೂ ಹಣ ವ್ಯಯಿಸುವುದನ್ನು ತಪ್ಪಿಸಿ, ಗ್ರಾಮೀಣ ಜನರ ಬಳಿಯೇ ಸೇವೆಗಳನ್ನು ತಲುಪಿಸುವ ಧ್ಯೇಯದೊಂದಿಗೆ ಗ್ರಾಮ ಒನ್ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ಕೃಷಿ, ತೋಟಗಾರಿಕೆ, ಕಂದಾಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಸೇರಿದಂತೆ ಹಲವಾರು ಸೇವೆಗಳು ಗ್ರಾಮ ಮಟ್ಟದಲ್ಲಿ ಲಭ್ಯವಾಗಿರುವ ಚಿಂತನೆಯಿಂದ ಗ್ರಾಮ ಒನ್ ಪ್ರಾರಂಭಿಸಲಾಗಿದೆ. ತಾಲ್ಲೂಕು ಕಛೇರಿಯಲ್ಲಿ ಸೇವೆಗಳಿಗಾಗಿ ಜನಸಂದಣಿ ತಪ್ಪಿಸಲು ಹಾಗೂ ಸೇವೆಗಳ ಪೂರೈಕೆಯಲ್ಲಿ ವಿಕೇಂದ್ರೀಕರಣದ ಉದ್ದೇಶದಿಂದ ಗ್ರಾಮಮಟ್ಟದಲ್ಲಿಯೂ ಈ ಎಲ್ಲ ಸೇವೆಗಳನ್ನು ಒದಗಿಸಲಾಗುವುದು. ಗ್ರಾಮಸ್ಥರು ನೇರವಾಗಿ ಗ್ರಾಮ ಪಂಚಾಯಿತಿಗಳಿಗೆ ತೆರಳಿ ಗ್ರಾಮ ಒನ್ ಸೇವೆಗಳನ್ನು ಪಡೆಯಬಹುದಾಗಿದೆ ಎಂದು ತಿಳಿಸಿದರು.

**‘ಜನರ ವಿಶ್ವಾಸವನ್ನು ಪುನರ್ ಸ್ಥಾಪಿಸುವ ಚಿಂತನೆ’ :** ಉತ್ತಮ ಸಲಕರಣೆ, ಸಮರ್ಥ ಹಾಗು ಸಧೃಡ ತಂತ್ರಜ್ಞಾನದಿಂದ ಯಾವುದೇ ಅಡಚಣೆಗಳಿಲ್ಲದೇ ಗ್ರಾಮೀಣ ಜನರಿಗೆ ಸೇವೆ ಒದಗಿಸುವ

ವ್ಯವಸ್ಥೆ ಕಲ್ಪಿಸಲಾಗಿದೆ. 12 ಜಿಲ್ಲೆಗಳ 3026 ಗ್ರಾಮ ಪಂಚಾಯಿತಿಗಳಲ್ಲಿ ಈ ಸೇವೆಯನ್ನು ಪ್ರಾರಂಭಿಸಲಾಗಿದ್ದು ಈ ಹಿಂದೆ 4 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಿ, ಅನುಷ್ಠಾನದಲ್ಲಿನ ಎಲ್ಲ ತೊಡಕುಗಳನ್ನು ನಿವಾರಿಸಲಾಗಿದೆ. ಜನರಿಗೆ ಸರ್ಕಾರದ ಸೇವೆಗಳನ್ನು ತಲುಪಿಸುವ ಕ್ರಾಂತಿಕಾರಿ ಬದಲಾವಣೆ ಇದಾಗಿದೆ. ತಳಮಟ್ಟದಲ್ಲಿ ಸರ್ಕಾರದ ಸೇವೆಗಳನ್ನು ಸಮರ್ಪಕವಾಗಿ ಸುಲಭವಾಗಿ ತಲುಪಿಸಲಾಗುವುದು. ಈ ವ್ಯವಸ್ಥೆಯ ಮೂಲಕ ಸರ್ಕಾರದ ಕಾರ್ಯನಿರ್ವಹಣೆಯ ಮೇಲಿನ ಜನರ ವಿಶ್ವಾಸವನ್ನು ಪುನರ್ ಸ್ಥಾಪಿಸುವ ಚಿಂತನೆ ಇದೆ ಎಂದು ತಿಳಿಸಿದರು.

**'ಗ್ರಾಮ ಸ್ವರಾಜ್ಯದಿಂದ ಗ್ರಾಮ ಸುರಾಜ್ಯ ಕಡೆಗೆ' :** ಮಹಾತ್ಮ ಗಾಂಧಿಯವರ ಗ್ರಾಮ ಸ್ವರಾಜ್ಯ ಹಾಗೂ ಅಟಲ್ ಬಿಹಾರಿ ವಾಜಪೇಯಿಯವರ ಗ್ರಾಮ ಸುರಾಜ್ಯ ಸ್ವರಾಜ್ಯದಿಂದ ಸುರಾಜ್ಯದೆಡೆಗೆ ಗ್ರಾಮಗಳನ್ನು ಒಯ್ಯಲು ಆಧುನಿಕ ತಂತ್ರಜ್ಞಾನ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದರು.

**'ಗ್ರಾಮ ಒನ್-ದಕ್ಷ ವ್ಯವಸ್ಥೆಯಾಗಲು ಸೂಚನೆ' :** ಮನೆ ಹೊಲ ಹಕ್ಕುಪತ್ರಗಳು, ಸಂಧ್ಯಾ ಸುರಕ್ಷಾ, ಅಂಗವಿಕಲರ ಮಾಸಾಶನ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ ಹೀಗೆ ಜನರ ಹತ್ತಾರು ಸೇವೆಗಳ ಅವಶ್ಯಕತೆಗಳನ್ನು ಪೂರೈಸುವ ಪ್ರಯತ್ನವಾಗಿದೆ. ಪ್ರಮುಖ ಸೇವೆಗಳಿಗೆ ಸೀಮಿತಗೊಳಿಸಿ ಅತ್ಯಂತ ದಕ್ಷ ವ್ಯವಸ್ಥೆಯನ್ನಾಗಿ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಈ ವ್ಯವಸ್ಥೆಯನ್ನು ನಿರಂತರವಾಗಿ ಸುಧಾರಿಸುವ ಮೂಲಕ ಜನರಿಗೆ ಸಮರ್ಪಕವಾಗಿ ಸೇವೆಗಳನ್ನು ಒದಗಿಸಲಾಗುವುದು ಎಂದರು.

**'ಗ್ರಾಮ ಒನ್ ಬಗ್ಗೆ ಜನರಲ್ಲಿ ಅರಿವು' :** ಶಾಸಕರು, ಸಚಿವರು ಹಾಗು ಜನಪ್ರತಿನಿಧಿಗಳು ಗ್ರಾಮ ಒನ್ ವ್ಯವಸ್ಥೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಿ ಗ್ರಾಮಗಳಿಗೆ ಭೇಟಿ ನಿಡಿದ ಸಂದರ್ಭದಲ್ಲಿ ಗ್ರಾಮ ಒನ್ ಕಾರ್ಯನಿರ್ವಹಣೆಯ ಬಗ್ಗೆ ಪರಿಶೀಲಿಸಬೇಕೆಂದು ಮುಖ್ಯಮಂತ್ರಿಗಳು ಸಲಹೆ ನೀಡಿದರು.

**'ಗ್ರಾಮ ಒನ್ ಯಶಸ್ಸಿಗೆ ಜಿಲ್ಲಾಧಿಕಾರಿಗಳ ನಾಯಕತ್ವ' :** ಗ್ರಾಮ ಒನ್‌ನ ಪ್ರಾಯೋಗಿಕ ಹಂತದಲ್ಲಿಯೇ 6 ಲಕ್ಷಕ್ಕಿಂತ ಹೆಚ್ಚು ಅರ್ಜಿಗಳನ್ನು ಸ್ವೀಕರಿಸಿ ಸೇವೆಗಳನ್ನು ಪೂರೈಸಲಾಗಿದೆ. ತಹಶೀಲ್ದಾರರು, ಸಹಾಯಕ ಕಮೀಷನರ್‌ರ ಸಹಕಾರ ಬಹಳ ಮುಖ್ಯ. ಆನ್‌ಲೈನ್‌ನಲ್ಲಿ ಸ್ವೀಕೃತವಾಗುವ ಅರ್ಜಿಗಳಿಗೆ ಶೀಘ್ರವಾಗಿ ಮಂಜೂರಾತಿ ನೀಡಿದಾಗ ಮಾತ್ರ ಸಂಬಂಧಪಟ್ಟ ಪ್ರಮಾಣ ಪತ್ರಗಳನ್ನು ಜನರಿಗೆ ದೊರಕಿಸಿಕೊಡಲು ಸಾಧ್ಯವಾಗುತ್ತದೆ. ಜನರಿಗೆ ಸೇವೆಗಳನ್ನು ಒದಗಿಸುವ ಎಲ್ಲಾ ಹಂತದ ವ್ಯವಸ್ಥೆಯನ್ನು ತಾಲ್ಲೂಕು ಕಛೇರಿಯಲ್ಲಿ ಕಲ್ಪಿಸಿ ಆನ್ಲೈನ್‌ನಲ್ಲಿಯೇ ಎಲ್ಲ ಪರಿಹಾರವನ್ನು ಒದಗಿಸುವ ವ್ಯವಸ್ಥೆ ಆಗಬೇಕು. ಇದಕ್ಕಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಈ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕೆ ಜವಾಬ್ದಾರಿ ಹಾಗೂ ನಾಯಕತ್ವ ವಹಿಸಬೇಕು. ಸರ್ಕಾರದ




ಪ್ರಥಮ ಆದ್ಯತೆಯ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದರು.

**'ಗ್ರಾಮೀಣ ಜನರ ಜೀವನಮಟ್ಟ ಸುಧಾರಿಸುವ ಗ್ರಾಮ ಒನ್' :** ಗ್ರಾಮೀಣ ಜನರ ಬದುಕಿನಲ್ಲಿ ಬದಲಾವಣೆ ತಂದು ಜೀವನದ ಗುಣಮಟ್ಟವನ್ನು ಉನ್ನತೀಕರಿಸಲು ಸರ್ಕಾರದ ಸೇವೆಗಳನ್ನು ಸುಲಭವಾಗಿ ದೊರಕಿಸಿಕೊಟ್ಟು ಗ್ರಾಮ ಒನ್ ವ್ಯವಸ್ಥೆಯ ಪರಿಕಲ್ಪನೆಯನ್ನು ಸಾಕಾರಗೊಳಿಸುವ ಹಾಗೂ ಜನಮನದಲ್ಲಿ ಉಳಿಯುವಂತಹ ಕಾರ್ಯಕ್ರಮ ವಾಗಬೇಕು. ಜನರ ಬದುಕನ್ನು ನಂ.1 ಮಟ್ಟಕ್ಕೆ ಏರಿಸಲು ಗ್ರಾಮ ಒನ್ ಸಹಕರಿಸುವಂತಾಗಲಿ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಹಾವೇರಿ ಜಿಲ್ಲೆ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಯೋಜನೆ ಉದ್ಘಾಟನಾ ಸಮಾರಂಭ ಸಂದರ್ಭದಲ್ಲಿ ಗ್ರಾಮಸ್ಥರಿಂದ ಅರ್ಜಿ ಸ್ವೀಕರಿಸಿ ಆಯುಷ್ಮಾನ್ ಭಾರತ ಆರ್.ಟಿ.ಸಿ ಸಂಧ್ಯಾ ಸುರಕ್ಷಾ ಕಾರ್ಡ್, ರಹವಾಸಿ ಪ್ರಮಾಣ ಪತ್ರ ಮುಂತಾದ ಪ್ರಮಾಣಪತ್ರಗಳನ್ನು ವಿತರಣೆ ಮಾಡಲಾಯಿತು. ತಕ್ಷಣವೇ ಪ್ರಮಾಣಪತ್ರ ವಿತರಿಸಲು ವ್ಯವಸ್ಥೆ ಮಾಡಿಕೊಂಡಿದ್ದ ಇ ಆಡಳಿತ ಇಲಾಖೆ ಅಧಿಕಾರಿಗಳ ಕಾರ್ಯವನ್ನು ಸಿಎಂ ಬೊಮ್ಮಾಯಿ ಶ್ಲಾಘಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕನಸಿನ ಯೋಜನೆಯಾಗಿರುವ ಗ್ರಾಮ ಒನ್ ಯೋಜನೆಯನ್ನು ಇಂದು ಲೋಕಾರ್ಪಣೆ ಮಾಡಲಾಯಿತು. ಸಿ.ಎಂ.ಬೊಮ್ಮಾಯಿ ಅವರು ಸಸಿಗೆ ನೀರೆರೆಯುವ ಮೂಲಕ ಗ್ರಾಮೀಣ ಭಾಗದ ಜನರಿಗೆ ಹಲವು ಅನುಕೂಲ ಒದಗಿಸುವ ಯೋಜನೆಗೆ ಚಾಲನೆ ನೀಡಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ, ಅಭಿವೃದ್ದಿ ಆಯುಕ್ತೆ ವಂದಿತಾ ಶರ್ಮಾ, ಎಸಿಎಸ್ ರಾಜೀವ ಚಾವ್ಲಾ, ಸಿ.ಎಂ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ ಮತ್ತು ಇತರರು ಉಪಸ್ಥಿತರಿದ್ದರು. ಗ್ರಾಮ ಒನ್ ಕೇಂದ್ರಗಳಿಂದ ಸಚಿವರಾದ ಅರಗ ಜ್ಞಾನೇಂದ್ರ ಬಿ. ಶ್ರೀರಾಮುಲು, ಬಿ.ಸಿ.ನಾಗೇಶ ಸೇರಿದಂತೆ ಇತರರು ಭಾಗವಹಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ಅಭಿಪ್ರಾಯ ಹಂಚಿಕೊಂಡರು.

# ಕೊಟ್ಟ ಮಾತು ಉಳಿಸಿಕೊಂಡ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ
# ಸ್ವಂತ ಮನೆಯಲ್ಲಿ ಕಮಲವ್ವನ ಸಂಕ್ರಾಂತಿ ಸಂಭ್ರಮ
# ಪ್ರವಾಹಕ್ಕೆ ಸೂರು ಕಳೆದುಕೊಂಡ ವೃದ್ಧೆಗೆ ನಾಲ್ಕೇ ತಿಂಗಳಲ್ಲಿ ಮನೆ



**ಹಾವೇರಿ :** ಭಾರಿ ಮಳೆಗೆ ಸೂರು ಕಳೆದುಕೊಂಡ ಕಮಲವ್ವನಿಗೆ ಗಣೇಶ ಹಬ್ಬವನ್ನೂ ಸಂಭ್ರಮಿಸಲಾಗದ ಸಂಕಟ. ಅಂದು ಖಾಸಗಿ ವಾಹಿನಿ ಪಬ್ಲಿಕ್ ಟಿವಿಯ ಸಂದರ್ಶನ ಕಾರ್ಯಕ್ರಮದಲ್ಲಿ ಜನರ ಸಂಕಷ್ಟ ಆಲಿಸಿ ಸ್ಥಳದಲ್ಲೇ ಪರಿಹಾರ ಸೂಚಿಸುತ್ತಿದ್ದ ಮುಖ್ಯಮಂತ್ರಿಗಳನ್ನು ಕಂಡು ಕಮಲವ್ವನೂ ತನ್ನ ಸಂಕಷ್ಟ ತೋಡಿಕೊಂಡಳು.

“ಇಬ್ಬರೂ ಗಂಡುಮಕ್ಕಳು ಸತ್ತ ಹೋಗ್ಯಾರ, ಮನಿ ಕಟ್ಟಿಸಿಕೊಡ್ರಿ ಸಾಹೇಬ್ರ” ಎಂದು ಗದ್ಗದಿತಳಾಗಿ ನುಡಿದ ಕಮಲವ್ವನಿಗೆ ಸಾಂತ್ವನ ಹೇಳಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಮಲವ್ವ ಸ್ವಂತ ಸೂರಿನಡಿ ಸಂಕ್ರಾಂತಿ ಆಚರಿಸುವಂತೆ ಮಾಡಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸ್ವಕ್ಷೇತ್ರ ಶಿಗ್ಗಾಂವಿಯ ಮಂಚಿನಕೊಪ್ಪ ಗ್ರಾಮದ ಕಮಲವ್ವ ತಿಮ್ಮನಗೌಡ್ರ ತಮಗೆ ಮನೆ ನಿರ್ಮಿಸಿಕೊಡುವಂತೆ ಮನವಿ ಮಾಡಿದ್ದರು. ಅವರ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳು ಜಿಲ್ಲಾಡಳಿತಕ್ಕೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು. ಅದರಂತೆ ನಾಲ್ಕೇ ತಿಂಗಳಿನಲ್ಲಿ ಮನೆ ನಿರ್ಮಿಸಿ, ಸಂಕ್ರಾಂತಿಯಂದು ಕಮಲವ್ವನಿಗೆ ಮನೆಯನ್ನು ಹಸ್ತಾಂತರಿಸಲಾಯಿತು.

ಹ್ಯಾಬಿಟ್ಯಾಟ್ ಸೆಂಟರ್ ಮೂಲಕ ನಿರ್ಮಿಸಲಾದ ಸುಸಜ್ಜಿತ ಮನೆಯನ್ನು ಸವಣೂರ ಉಪ ವಿಭಾಗಾಧಿಕಾರಿ ಅನ್ನಪೂರ್ಣ ಮುದಕಮ್ಮನವರ ಅವರು ಹಸ್ತಾಂತರಿಸಿದರು.

## ಪಿ.ಎಂ. ಕಿಸಾನ್ ಕರ್ನಾಟಕ : ವರ್ಷದ 2ನೇ ಕಂತಿನ ನೆರವು - 1007.18 ಕೋಟಿ ರೂ. ಬಿಡುಗಡೆ



**ಬೆಂಗಳೂರು :** ಪಿ.ಎಂ. ಕಿಸಾನ್ ಕರ್ನಾಟಕ ಯೋಜನೆಯಡಿ ಪಿಎಂ–ಕಿಸಾನ್ ಫಲಾನುಭವಿಗಳಿಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ವಾರ್ಷಿಕ 4 ಸಾವಿರ ರೂ.ನೆರವು ನೀಡುವ ಯೋಜನೆಯಡಿ ಈ ಆರ್ಥಿಕ ವರ್ಷದ 2ನೇ ಕಂತಿನ ನೆರವಿಗಾಗಿ ರಾಜ್ಯ ಸರ್ಕಾರ 1007.18 ಕೋಟಿ ರೂ. ಬಿಡುಗಡೆ ಮಡಿದದು ರೈತರ ಖಾತೆಗೆ ವರ್ಗಾವನೆ ಮಾಡಲಾಗಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 10ನೇ ಕಂತಿನ ನೆರವು ಬಿಡುಗಡೆಯ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ರಾಜ್ಯದ 34.26 ಲಕ್ಷ ರೈತರಿಗೆ 685.28 ಕೋಟಿ ರೂ. ನೆರವು ಬಿಡುಗಡೆ ಮಾಡಲಾಗಿದೆ.

ಈ ವರ್ಚುಯಲ್ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾಗವಹಿಸಿದ್ದರು. ರಾಜ್ಯದಲ್ಲಿ ಒಟ್ಟು 54.52 ಲಕ್ಷ ರೈತರು ಈ ವರೆಗೆ ಕನಿಷ್ಠ ಒಂದು ಕಂತಿನ ನೆರವನ್ನು ಪಡೆದಿದ್ದಾರೆ.

ಈ ಯೋಜನೆಯಡಿ ಕೇಂದ್ರ ಸರ್ಕಾರವು ಒಟ್ಟು ಇಲ್ಲಿಯವರೆಗೆ 8022.69 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದ್ದು ರಾಜ್ಯ ಸರ್ಕಾರವು 2850.54ಕೋಟಿ ಬಿಡುಗಡೆ ಮಾಡಿದೆ.

ಇದೇ ಸಂದರ್ಭದಲ್ಲಿ ರಾಜ್ಯದ 30 ರೈತ ಉತ್ಪಾದಕ ಸಂಸ್ಥೆಗಳಿಗೆ 121ಕೋಟಿ ರೂ. ನೆರವು ಬಿಡುಗಡೆ ಮಾಡಲಾಯಿತು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್, ಕೃಷಿ ಇಲಾಖೆ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಕರ್ನಾಟಕ ಸರ್ಕಾರ
# ಸಹಕಾರ ಚುನಾವಣಾ ಪ್ರಾಧಿಕಾರ

ಟಿ.ಟಿ.ಎಂ.ಸಿ. ಕಟ್ಟಡ, 3ನೇ ಮಹಡಿ, "ಎ" ಬ್ಲಾಕ್, ಶ್ರೀ ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು–560027.

Website : coca.karnataka.gov.in, Email : coca-coop@karnataka.gov.in Phone : 080-22220066/29709014

ಸಂಖ್ಯೆ : ಸಚುಪ್ರಾ/ಆಡಳಿತ/ಕೋವಿಡ್–19/6(5)/ಸುತ್ತೋಲೆ/2022 ದಿನಾಂಕ : 20.01.2022

## ಸುತ್ತೋಲೆ

ವಿಷಯ : ಸಹಕಾರ ಸಂಘಗಳ / ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಂದೂಡುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಪತ್ರ ಸಂಖ್ಯೆ : ಸಿಒ.29.ಸಿಎಲ್‌ಎಮ್.2021 ದಿನಾಂಕ : 18.06.2021.
2) ಈ ಕಛೇರಿಯ ಸುತ್ತೋಲೆ / ತಿದ್ದೋಲೆ ದಿನಾಂಕ : 21.06.2021.
3) ಸರ್ಕಾರದ ಪತ್ರ ಸಂಖ್ಯೆ : ಸಿಒ.40.ಸಿಎಲ್‌ಎಮ್.2021 ದಿನಾಂಕ : 17.07.2021
4) ಈ ಕಛೇರಿಯ ಸುತ್ತೋಲೆ ದಿನಾಂಕ : 19.07.2021
5) ಸರ್ಕಾರದ ಪತ್ರ ಸಂಖ್ಯೆ : ಸಿಒ.40.ಸಿಎಲ್‌ಎಮ್.2021(ಭಾಗ–1) ದಿನಾಂಕ : 08.10.2021.
6) ಈ ಕಛೇರಿಯ ಸುತ್ತೋಲೆ ದಿನಾಂಕ : 08.10.2021.
7) ಸರ್ಕಾರದ ಪತ್ರ ಸಂಖ್ಯೆ : ಸಿಒ.03.ಸಿಎಲ್‌ಎಮ್.2022(ಇ) ದಿನಾಂಕ : 19.01.2022

* * * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳ ಕಡೆ ತಮ್ಮ ಗಮನವನ್ನು ಸೆಳೆಯಲಾಗಿದೆ. ಉಲ್ಲೇಖ (1) ಮತ್ತು (3)ರ ಸರ್ಕಾರದ ಆದೇಶದಂತೆ ಉಲ್ಲೇಖ (2) ಮತ್ತು (4)ರ ಈ ಕಛೇರಿಯ ಸುತ್ತೋಲೆಗಳಲ್ಲಿ ಕೋವಿಡ್–19ರ 2ನೇ ಅಲೆಯ ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ಸಹಕಾರ ಸಂಘಗಳ / ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಸಾಮಾನ್ಯ ಚುನಾವಣೆಗಳನ್ನು ಡಿಸೆಂಬರ್–2021ರ ಅಂತ್ಯದವರೆಗೆ ಮುಂದೂಡಲಾಗಿತ್ತು.

ನಂತರದಲ್ಲಿ ಉಲ್ಲೇಖ (5)ರ ಸರ್ಕಾರದ ಪತ್ರದಲ್ಲಿ ಸಹಕಾರ ಸಂಘಗಳ / ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಸಾಮಾನ್ಯ ಚುನಾವಣೆಗಳನ್ನು ನಡೆಸಲು ಕ್ರಮವಿಡುವಂತೆ ತಿಳಿಸಿದ ಹಿನ್ನೆಲೆಯಲ್ಲಿ ಉಲ್ಲೇಖ (6) ಈ ಕಛೇರಿಯ ಸುತ್ತೋಲೆಯಲ್ಲಿ ಚುನಾವಣೆಗಳನ್ನು ಮುಂದೂಡುವ ಪೂರ್ವದಲ್ಲಿ ಚುನಾವಣಾ ಪ್ರಕ್ರಿಯೆಯು ಯಾವ ಹಂತದಲ್ಲಿ ನಿಲ್ಲಿಸಲಾಗಿತ್ತೋ ಆ ಹಂತದಿಂದ ಪ್ರಾರಂಭಿಸಿ ಚುನಾವಣಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಮತ್ತು ಆಡಳಿತ ಮಂಡಲಿ ಅವಧಿ ಮುಕ್ತಾಯಗೊಂಡು ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗದೆ ಆಡಳಿತಾಧಿಕಾರಿ / ವಿಶೇಷಾಧಿಕಾರಿಗಳು ನೇಮಕಗೊಂಡ ಹಾಗೂ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾಗುವ ಸಹಕಾರ ಸಂಘಗಳ ಚುನಾವಣೆಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ / ನಿಯಮಗಳು ಮತ್ತು ಕರ್ನಾಟಕ ಸೌಹಾರ್ದ ಸಹಕಾರಿಗಳ ಅಧಿನಿಯಮ / ನಿಯಮಗಳ ಅನುಸಾರ ಚುನಾವಣಾ ಪ್ರಕ್ರಿಯೆಯನ್ನು ಪ್ರಾರಂಭಿಸಿ ಪೂರ್ಣಗೊಳಿಸಲು ತಿಳಿಸಿ ಸುತ್ತೋಲೆಯನ್ನು ಹೊರಡಿಸಲಾಗಿತ್ತು.

ಮುಂದುವರೆದು, ಉಲ್ಲೇಖ (7) ರಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ 3ನೇ ಅಲೆಯಿಂದಾಗಿ ಹಾಗೂ ಓಮಿಕ್ರಾನ್ ರೂಪಾಂತರ ತಳಿಯು ವ್ಯಾಪಕವಾಗಿ ಹರಡುತ್ತಿರುವ ಕಾರಣ ರಾಜ್ಯ ಸರ್ಕಾರವು ಮಾರ್ಗಸೂಚಿಗಳನ್ನು ಜಾರಿಗೆ ತಂದಿದ್ದು, ಪ್ರಸ್ತುತ ಮಾರ್ಗಸೂಚಿಗಳು ಜಾರಿಯಲ್ಲಿದ್ದು ಪ್ರಸ್ತುತ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಯನುಸಾರ ರಾಜ್ಯದಲ್ಲಿರುವ ಸಹಕಾರ ಸಂಘಗಳು / ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಕೋವಿಡ್–19ರ ನಿಯಮಗಳ ಪಾಲನೆ ಮಾಡಿಕೊಂಡು ಚುನಾವಣೆ ನಡೆಸುವುದು ಕಷ್ಟಸಾಧ್ಯವಾಗಬಹುದು. ಸದರಿ ಚುನಾವಣೆಗಳು ಜರುಗಿದ್ದಲ್ಲಿ ಸಾಂಕ್ರಾಮಿಕ ರೋಗವು ಹರಡುವ ಸಾಧ್ಯತೆ ಇರುವ ಹಿನ್ನಲೆಯಲ್ಲಿ ಎಲ್ಲಾ ಸಹಕಾರ ಸಂಘಗಳು / ಬ್ಯಾಂಕುಗಳ ಮತ್ತು ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮಾರ್ಚ್–2022ರ ಅಂತ್ಯದವರೆಗೆ ಅಥವಾ ಮುಂದಿನ ಆದೇಶದವರೆಗೂ ಮುಂದೂಡುವಂತೆ ಹಾಗೂ ಈಗಾಗಲೇ ಚುನಾವಣಾ ಪ್ರಕ್ರಿಯೆಗಳನ್ನು ಪ್ರಾರಂಭಿಸಿರುವ ಪ್ರಕರಣಗಳಿಗೂ ಸಹ ಮೇಲಿನ ಕ್ರಮ ಅನ್ವಯವಾಗುವಂತೆ ಸೂಕ್ತ ಸುತ್ತೋಲೆಯನ್ನು ಹೊರಡಿಸಲು ಅಗತ್ಯ ಕ್ರಮವಿಡುವಂತೆ ನಿರ್ದೇಶಿಸಲಾಗಿರುತ್ತದೆ.

ಉಲ್ಲೇಖ (7)ರ ಸರ್ಕಾರದ ಪತ್ರದಲ್ಲಿನ ನಿರ್ದೇಶನದಂತೆ ಮಾರ್ಚ್–22ರ ಅಂತ್ಯದವರೆಗೆ ಅಥವಾ ಮುಂದಿನ ಆದೇಶದವರೆಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ಮತ್ತು ನಿಯಮಗಳು, 1960ರ ನಿಯಮ 14ಹೆಚ್ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು ನಿಯಮ 5–ಎಂ ಗಳಂತೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ದತ್ತವಾದ ಅಧಿಕಾರವನ್ನು ಚಲಾಯಿಸಿ ರಾಜ್ಯದ ಎಲ್ಲಾ ಸಹಕಾರ ಸಂಘಗಳು / ಬ್ಯಾಂಕುಗಳು ಮತ್ತು ಸೌಹಾರ್ದ ಸಹಕಾರಿಗಳ ಸಾಮಾನ್ಯ ಚುನಾವಣೆ ಮತ್ತು ಆಡಳಿತ ಮಂಡಲಿಯಲ್ಲಿ ಖಾಲಿಬಿದ್ದ ನಿರ್ದೇಶಕರ ಸ್ಥಾನಗಳ ಚುನಾವಣೆಗಳನ್ನು ಮಾರ್ಚ್–2022ರ ಅಂತ್ಯದವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ.

(ಕಛೇರಿ ಟಿಪ್ಪಣಿಯು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಸಹಿ/–

ಉಪ ಕಾರ್ಯದರ್ಶಿ,

ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು.

## ಸದಸ್ಯರ ಅಗತ್ಯಗಳಿಗೆ ಆದ್ಯತೆ :

# ಪ್ರಗತಿಯ ಹಾದಿಯಲ್ಲಿ ಭದ್ರಾವತಿಯ ಟೌನ್ ಭಾವಸಾರ ಕ್ಷತ್ರಿಯ ಕೋ-ಆಪರೇಟಿವ್ ಸೊಸೈಟಿ

ಪ್ರಸ್ತುತ ಸಂಘದ ಅಧ್ಯಕ್ಷರಾದ ದುರ್ಗೇಶ್ ಟಿ.ಎಸ್ ಇವರು 2005ರಲ್ಲಿ ನಿರ್ದೇಶಕರಾಗಿ ಆಯ್ಕೆಯಾಗಿ ನಂತರ 2009ರಿಂದ ಸಂಘದ ಅಧ್ಯಕ್ಷರಾಗಿದ್ದು ಇಲ್ಲಿಯವರೆಗೂ ಮುಂದುವರೆದಿರುತ್ತಾರೆ. 2009ರಲ್ಲಿ ಅಧ್ಯಕ್ಷರಾದ ಸಂದರ್ಭದಲ್ಲಿ ಸಂಘದ ವಾರ್ಷಿಕ ವಹಿವಾಟು ರೂ.3.05ಕೋಟಿ ಇದ್ದು ಇಂದು ರೂ. 23.58 ಕೋಟಿ ಸಂಗ್ರಹವಾಗಿದ್ದು ಇವರೆಲ್ಲರ ಪರಿಶ್ರಮಕಾರಣವಾಗಿದೆ. ಸಂಘದಲ್ಲಿ ಜಾರಿಗೆ ತಂದಿರುವ ಹಲವಾರು ಹೊಸ ಯೋಜನೆಗಳು ಸದಸ್ಯರು ಆರ್ಥಿಕವಾಗಿ ಸ್ವಾವಲಂಬಿಯಾಗಲು ಬಹು ಮುಖ್ಯ ಪಾತ್ರ ವಹಿಸಿದೆ. ಅಲ್ಲದೆ 2020-2021ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರು 'ಎ' ಶ್ರೇಣಿಯ ಸಹಕಾರ ಸಂಘ ಎಂದು ದೃಡೀಕರಿಸಿರುತ್ತಾರೆ. 2020-21ನೇ ಸಾಲಿನಲ್ಲಿ ಸಂಘವು 1754ಜನ ಸದಸ್ಯರನ್ನು ಹೊಂದಿದ್ದು, ಒಟ್ಟು ಷೇರು ಬಂಡವಾಳ ರೂ.32.88 ಲಕ್ಷ ಸಂಗ್ರಹಿಸಿದ್ದು, ಆಪದ್ಧನ ನಿಧಿ ರೂ.31.12 ಲಕ್ಷ, ಒಟ್ಟು ಠೇವಣಿಗಳು ರೂ.6.84 ಕೋಟಿ ಹಾಗೂ ದುಡಿಯುವ ಬಂಡವಾಳ ರೂ.8.30 ಕೋಟಿ ಹೊಂದಿರುತ್ತದೆ. ಸಂಘವು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿಯ ಪಥದತ್ತ ಸಾಗುತ್ತಿದ್ದು ಪ್ರಸ್ತುತ 2020-21ನೇ ಸಾಲಿನಲ್ಲಿ ರೂ.12.46ಲಕ್ಷ ಲಾಭಗಳಿಸಿರುತ್ತದೆ.




ಸಹಕಾರ ಎಂಬ ಪದವೇ ಒಟ್ಟಿಗೆ ಕೆಲಸ ಮಾಡು ಎಂಬುದಾಗಿದೆ. ಸಮುದಾಯವೊಂದರ ಅಭಿವೃದ್ಧಿ ಸಾಧಿಸುವ ಮೂಲಕ ಸದಸ್ಯರಲ್ಲಿ ಉಳಿತಾಯ ಮನೋಭಾವನೆ ಬೆಳೆಸಿ, ಅವರನ್ನು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಪ್ರೋತ್ಸಾಹ ನೀಡುವುದು ಸಹಕಾರ ಚಳವಳಿಯ ಮೂಲ ಆಶಯವಾಗಿದೆ. ಈ ಸದುದ್ದೇಶದ ಈಡೇರಿಕೆಗಾಗಿ ಇಂದು ಹಲವಾರು ಸಹಕಾರ ಸಂಸ್ಥೆಗಳು ಪ್ರಾರಂಭವಾಗಿ ಉತ್ತಮವಾಗಿ ಕಾರ್ಯನಿರ್ವಹಿಸುವುದರೊಂದಿಗೆ ಪ್ರಗತಿಯ ಹಾದಿಯಲ್ಲಿ ಹೆಜ್ಜೆ ಹಾಕುತ್ತಿವೆ. ಇಂತಹ ಸಹಕಾರ ಸಂಸ್ಥೆಗಳಲ್ಲಿ ಒಂದಾಗಿದೆ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ಟವನ್ ಭಾವಸಾರ ಕ್ಷತ್ರಿಯ ಕೋ-ಆಪರೇಟಿವ್ ಸೊಸೈಟಿಯು ಒಂದಾಗಿದ್ದು, ಟೈಲರ್ ವೃತ್ತಿಯನ್ನು ಅವಲಂಬಿಸಿರುವ ಭಾವಸಾರ ಕ್ಷತ್ರಿಯ ಸಮಾಜದ ಸ್ವಾವಲಂಬನೆ ಜೀವನಕ್ಕೆ ನೆರವಾಗುತ್ತಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೇವಲ ಬೆರಳೆಣಿಕೆಯಷ್ಟು ಸಹಕಾರ ಸಂಘಗಳು ಇದ್ದಂತಹ ಸಂದರ್ಭದಲ್ಲಿ ಭದ್ರಾವತಿಯಲ್ಲಿ ಟೈಲರ್ ವೃತ್ತಿಯನ್ನೆ ಅವಲಂಭಿಸಿದ್ದ ಭಾವಸಾರ ಕ್ಷತ್ರಿಯ ಸಮಾಜದ ಜನರು ಒಗ್ಗೂಡಿ ಸಮಾಜ ಸುಧಾರಣೆಯ ಸದುದ್ದೇಶದಿಂದ ದಿನಾಂಕ : 06-10-1933 ರಂದು ಸಂಸ್ಥಾಪಕ ಅಧ್ಯಕ್ಷರಾದ ದಿವಂಗತ ಉತ್ತರ್‌ಕರ್ ನಾರಾಯಣರಾವ್ ಇವರ ನೇತೃತ್ವದಲ್ಲಿ ರಿ.ನಂ-ಎ.ಆರ್.ಎಸ್.374/1933-34ರೊಂದಿಗೆ ಭದ್ರಾವತಿ ಟೌನ್ ಭಾವಸಾರ ಕ್ಷತ್ರಿಯ ಕೋ-ಆಪರೇಟಿವ್ ಸೊಸೈಟಿಯನ್ನು ಪ್ರಾರಂಭಿಸಲಾಯಿತು. ಇದರ ಕಾರ್ಯವ್ಯಾಪ್ತಿಯು ಭದ್ರಾವತಿ ನಗರಸಭೆ / ಮಹಾನಗರಪಾಲಿಕೆ ವ್ಯಾಪ್ತಿ ಹೊಂದಿ ಇಂದು ಕಾರ್ಯನಿರ್ವಹಿಸುತ್ತಿದೆ. ಈ ಮೂಲಕ ಟೈಲರ್ ಸಮುದಾಯದ ಆರ್ಥಿಕಾಭಿವೃದ್ಧಿಗೆ ನೆರವಾಗಿದೆ.

| 2020–21ನೇ ಸಾಲಿನ ಪ್ರಗತಿಯ ವಿವರ | |
|---|---|
| ಸದಸ್ಯರು | 1754 ಜನ |
| ಷೇರು ಬಂಡವಾಳ | 32,88,550/– |
| ಆಪದ್ಧನ ನಿಧಿ | 31,12,153/– |
| ಒಟ್ಟು ಠೇವಣಿಗಳು | 6,84,92,019/– |
| ಒಟ್ಟು ಸಾಲಗಳು | 3,30,08,507/– |
| ನಿವ್ವಳ ಲಾಭ | 12,46,672/– |
| ಆಡಿಟ್ ವರ್ಗೀಕರಣ | 'ಎ' |

ಈ ಸಹಕಾರ ಸಂಘವು ಟೈಲರ್ ವೃತ್ತಿಯನ್ನು ಹಾಗೂ ಇತರ ಸಣ್ಣ ವೃತ್ತಿಯನ್ನು ಅವಲಂಭಿಸಿ ಆರ್ಥಿಕವಾಗಿ ಹಿಂದುಳಿದ ಜನರನ್ನು ಆರ್ಥಿಕವಾಗಿ ಸಧೃಢರನ್ನಾಗಿ ಮಾಡುವುದೇ ಸಂಘದ ಮುಖ್ಯ ಉದ್ದೇಶವಾಗಿದೆ.

ಪ್ರಸ್ತುತ ಸಂಘದ ಅಧ್ಯಕ್ಷರಾದ ದುಗ್ಗೇಶ್ ಟಿ.ಎಸ್ ಇವರು 2005ರಲ್ಲಿ ನಿರ್ದೇಶಕರಾಗಿ ಆಯ್ಕೆಯಾಗಿ ನಂತರ 2009ರಿಂದ ಸಂಘದ ಅಧ್ಯಕ್ಷರಾಗಿದ್ದು ಇಲ್ಲಿಯವರೆಗೂ ಮುಂದುವರೆದಿರುತ್ತಾರೆ. 2009ರಲ್ಲಿ ಅಧ್ಯಕ್ಷರಾದ ಸಂದರ್ಭದಲ್ಲಿ ಸಂಘದ ವಾರ್ಷಿಕ ವಹಿವಾಟು ರೂ.3.05ಕೋಟಿ ಇದ್ದು ಇಂದು ರೂ. 23.58 ಕೋಟಿ ಸಂಗ್ರಹವಾಗಿದ್ದು ಇವರೆಲ್ಲರ ಪರಿಶ್ರಮಕಾರಣವಾಗಿದೆ. ಸಂಘದಲ್ಲಿ ಜಾರಿಗೆ ತಂದಿರುವ ಹಲವಾರು ಹೊಸ ಯೋಜನೆಗಳು ಸದಸ್ಯರು ಆರ್ಥಿಕವಾಗಿ ಸ್ವಾವಲಂಬಿಯಾಗಲು ಬಹು ಮುಖ್ಯ ಪಾತ್ರ ವಹಿಸಿದೆ. ಅಲ್ಲದೆ 2020–2021ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರು 'ಎ' ಶ್ರೇಣಿಯ ಸಹಕಾರ ಸಂಘ ಎಂದು ದೃಡೀಕರಿಸಿರುತ್ತಾರೆ. 2020–21ನೇ ಸಾಲಿನಲ್ಲಿ ಸಂಘವು 1754ಜನ ಸದಸ್ಯರನ್ನು ಹೊಂದಿದ್ದು, ಒಟ್ಟು ಷೇರು ಬಂಡವಾಳ ರೂ.32.88 ಲಕ್ಷ ಸಂಗ್ರಹಿಸಿದ್ದು, ಆಪದ್ಧನ ನಿಧಿ ರೂ.31.12 ಲಕ್ಷ, ಒಟ್ಟು ಠೇವಣಿಗಳು ರೂ.6.84 ಕೋಟಿ ಹಾಗೂ ದುಡಿಯುವ ಬಂಡವಾಳ ರೂ.8.30 ಕೋಟಿ ಹೊಂದಿರುತ್ತದೆ.

ಸಂಘವು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿಯ ಪಥದತ್ತ ಸಾಗುತ್ತಿದ್ದು ಪ್ರಸ್ತುತ 2020–21ನೇ ಸಾಲಿನಲ್ಲಿ ರೂ.12.46ಲಕ್ಷ ಲಾಭಗಳಿಸಿರುತ್ತದೆ. ಸಂಘದಲ್ಲಿ ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ ಜಾರಿಯಲ್ಲಿದ್ದು ಸಂಘದ ಸದಸ್ಯರು ಮರಣಹೊಂದಿದಾಗ ಅವರ ನಾಮಿನಿದಾರರಿಗೆ ರೂ.8,000/– ಗಳನ್ನು ಮರಣನಿಧಿಯಾಗಿ ಪಾವತಿ ಮಾಡಲಾಗುತ್ತಿದೆ. ಹಾಗೂ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಉತ್ತೀರ್ಣರಾದ ಸದಸ್ಯರ ಮಕ್ಕಳಿಗೆ ಪ್ರತಿ ವರ್ಷ ನಡೆಯುವ ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಪ್ರತಿಬಾ ಪುರಸ್ಕಾರ ನೀಡಲಾಗುತ್ತಿದೆ.

ಸಂಘದ ಅಧ್ಯಕ್ಷರಾದ ದುಗ್ಗೇಶ್ ಟಿ.ಎಸ್. ಇವರು ದಿನಾಂಕ : 30–08–2020 ರಂದು ಶಿವಮೊಗ್ಗ ಜಿಲ್ಲಾ ಸಹಕಾರ ಯೂನಿಯನ್ನಿನಲ್ಲಿ ನಡೆದ ನಿರ್ದೇಶಕರ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಸ್ಪರ್ಧಿಸಿ ಆಯ್ಕೆಯಾಗಿದ್ದು, ನಂತರ ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ಶಿವಮೊಗ್ಗ ಜಿಲ್ಲಾ ಸಹಕಾರ ಯೂನಿಯನ್ನಿನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿ ಜಿಲ್ಲೆಯ ಎಲ್ಲಾ ರೀತಿಯ ಸಹಕಾರ ಸಂಘಗಳ ಶ್ರೇಯೊಭಿವೃದ್ಧಿಗೆ ಶ್ರಮಿಸುತ್ತಿರುವುದು ಸಹಕಾರ ಕ್ಷೇತ್ರದಲ್ಲಿ ಹೆಮ್ಮೆಯ ವಿಚಾರವಾಗಿದೆ. ಬ್ಯಾಂಕು ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿದ್ದು ಇತರೆ ಸಹಕಾರ ಸಂಸ್ಥೆಗಳಿಗೆ ಮಾದರಿಯಾಗಿದೆ.

## ಆಡಳಿತ ಮಂಡಳಿ ಸದಸ್ಯರುಗಳು



**ದುಗ್ಗೇಶ್ ಟಿ.ಎಸ್.**
ಅಧ್ಯಕ್ಷರು



**ಯೋಗೇಶ್‌ಕುಮಾರ್ ಹೆಚ್.ಎನ್**
ಉಪಾಧ್ಯಕ್ಷರು



**ನಾಗಭೂಷಣ್ ಟಿ.ವಿ.**
ನಿರ್ದೇಶಕರು



**ಹರೀಶ್ ಪಿ.**
ನಿರ್ದೇಶಕರು



**ಮುರಳಿಧರ್ ಯು.ಎನ್.**
ನಿರ್ದೇಶಕರು



**ಅಮಿತ್‌ಕುಮಾರ್ ಜಿ.ಎಂ.**
ನಿರ್ದೇಶಕರು



**ಉಮೇಶ್‌ರಾವ್ ಎಸ್.**
ನಿರ್ದೇಶಕರು



**ಸತೀಶ್ ಎಂ.ಆರ್.**
ನಿರ್ದೇಶಕರು



**ಪೂರ್ಣಿಮಾ**
ನಿರ್ದೇಶಕರು



**ಮಂಜುಳಾ ಎಂ.**
ನಿರ್ದೇಶಕರು



**ಧನಲಕ್ಷ್ಮಿ ಎ.ಎಸ್.**
ನಿರ್ದೇಶಕರು



**ಜಗದೀಶಕುಮಾರ್ ಎ.ಎಸ್.**
ಕಾರ್ಯದರ್ಶಿ

# ಸಹಕಾರ ಸಂಸ್ಥೆಗಳು ಎದುರಿಸುತ್ತಿರುವ ಸವಾಲುಗಳು ಹಾಗೂ ಪರಿಹಾರ ಕ್ರಮಗಳು (Challenges and Solutions)

▸▸ **ಹೆಚ್.ಎಸ್.ನಾಗರಾಜಯ್ಯ,** ಕೆ.ಸಿ.ಎಸ್., ಸಹಕಾರ ಸಂಘಗಳ ಅಪರ ನಿಬಂಧಕರು (ನಿ.), ಬೆಂಗಳೂರು.

**ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರದಲ್ಲಿನ ಕೊರತೆ ಸವಾಲಾಗಿ ಪರಿಣಮಿಸಿದೆ. ಪ್ರಸ್ತುತ ನಮ್ಮ ಮೂಲಭೂತ ಶಿಕ್ಷಣ ವ್ಯವಸ್ಥೆಯಲ್ಲಿ ಸಹಕಾರ ಶಿಕ್ಷಣವನ್ನು ಪರಿಚಯಿಸದಿರುವುದು ದೊಡ್ಡ ಸವಾಲಾಗಿರುತ್ತದೆ. ಸಹಕಾರ ಶಿಕ್ಷಣ, ತರಬೇತಿ ಮತ್ತು ಮಾಹಿತಿ ಬಗ್ಗೆ NCCT(National Council for co operative Training) NCUI(National Cooperative Union of India) Karnataka state co operative Federation, District level co op unions, Karnataka Institute of coop Management, RICM ಮುಂತಾದವುಗಳಲ್ಲಿ ವೃತ್ತಿಆಧಾರಿತ ಕೋರ್ಸ್‌ಗಳನ್ನು ಅಧ್ಯಯನಕ್ಕೆ ಒಳಪಡಿಸುವುದಲ್ಲದೇ, ಸಹಕಾರ ಶಿಕ್ಷಣ ತರಬೇತಿ ಮತ್ತು ಪ್ರಚಾರದಲ್ಲಿ ಅಮೂಲಾಗ್ರ ಸುಧಾರಣಾ ಕ್ರಮಗಳ ಅಗತ್ಯವಿದೆ. ಈ ಸಂಸ್ಥೆಗಳ ಆಡಳಿತ ಮಂಡಲಿಗಳು ಶೈಕ್ಷಣಿಕ ಪಾಂಡಿತ್ಯವುಳ್ಳ ಶಿಕ್ಷಣ ತಜ್ಞರನ್ನು ಹಾಗೂ ವಾಸ್ತವ ಅನುಭವಿಗಳನ್ನು (Academicians') ಪದನಿಮಿತ್ತ ನಿರ್ದೇಶಕರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆಗೊಳಿಸಿ ಹೆಚ್ಚಿನ ಮಾನ್ಯತೆ ನೀಡುವುದು ಸೂಕ್ತವಾಗಿದೆ.**

ಭಾರತದಲ್ಲಿ ಸಹಕಾರ ಸಂಘಗಳು ಅಧಿಕೃತವಾಗಿ ಸಹಕಾರ ಕಾಯ್ದೆಯಡಿಯಲ್ಲಿ ಕಾರ್ಯಾರಂಭ ಮಾಡಿದ್ದು ಕ್ರೆಡಿಟ್ ಸಹಕಾರ ಸಂಘಗಳ ಕಾಯ್ದೆ 1904.

ಭಾರತದಲ್ಲಿ ಸಹಕಾರ ಚಳುವಳಿ ಸರ್ಕಾರದ ಪ್ರಯೋಜಿತ ಚಳುವಳಿ ಹೊರತು, ಜನರ ಸ್ವ ಪ್ರೇರಣಾ ಚಳುವಳಿಯಾಗಿ ಪ್ರಾರಂಭವಾದುದ್ದಲ್ಲ. ಸಹಕಾರ ಚಳುವಳಿ ಜನರಿಂದ, ಜನರಿಗಾಗಿ ಹಾಗೂ ಜನರಿಗೋಸ್ಕರ ಚಳುವಳಿಯಾಗಬೇಕು. ಪ್ರಸ್ತುತ ಈ ಚಳುವಳಿಯಲ್ಲಿ ದೇಶದ ಒಟ್ಟು ಜನಸಂಖ್ಯೆಯಲ್ಲಿ ಕೇವಲ ಶೇ.22 ರಷ್ಟು ಜನರು ಪಾಲ್ಗೊಂಡಿರುವುದು ಜನರ ನಿರಾಸಕ್ತಿಯನ್ನು ತೋರಿರುವುದು ಸಹಕಾರ ಕ್ಷೇತ್ರದ ಬೆಳವಣಿಗೆಗೆ ಸವಾಲಾಗಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಯುವಕರು, ಮಹಿಳೆಯರು ಅಲ್ಪಸಂಖ್ಯಾತರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರು ಚಳುವಳಿಯ ಮುಖ್ಯವಾಹಿನಿ (Main Stream) ಹಾಗೂ ಮಂಜೂಣಿಯಲ್ಲಿ ಇಲ್ಲದಿರುವುದು ಸವಾಲಾಗಿ ಪರಿಣಮಿಸಿದೆ. ಸದಸ್ಯರಾದವರಲ್ಲೂ ಸಕ್ರಿಯ ಭಾಗವಹಿಸುವಿಕೆ (Active Participation) ಕಡ್ಡಾಯಗೊಳಿಸಿ ಆಸಕ್ತ ಸದಸ್ಯರನ್ನು (passive members) ಪರಿವರ್ತಿಸುವುದು ಅಗತ್ಯವಿದೆ. ಆದಕಾರಣ, ಸಹಕಾರ ತತ್ವ ಮತ್ತು ಸಿದ್ಧಾಂತವನ್ನು ಕಾರ್ಯರೂಪಕ್ಕೆ ತರುವುದರ ಮೂಲಕ ಸಾರ್ವಜನಿಕರು ಹಾಗೂ ಸದಸ್ಯರಲ್ಲಿ ಜಾಗೃತಿ, ಸದಸ್ಯ ಶಿಕ್ಷಣ ವಿಚಾರ ವಿನಿಮಯ, ಕಾರ್ಯಾಗಾರಗಳನ್ನು ಕೆಳಸ್ತರದಿಂದ ನಿರಂತರವಾಗಿ ಮುಂದುವರೆಸಿದ್ದಲ್ಲಿ ಮಾತ್ರ ಅವರನ್ನು ಸಹಕಾರ ಕ್ಷೇತ್ರಕ್ಕೆ ಆಕರ್ಷಿಸಲು ಸಾಧ್ಯವಾಗುತ್ತದೆ.

ಸಹಕಾರ ಕ್ಷೇತ್ರದ ವಿವಿಧ ವಲಯಗಳಲ್ಲಿ ವೃತ್ತಿಪರತೆ ಮತ್ತು ವೃತ್ತಿ ನೈಪುಣ್ಯತೆ ಕೊರತೆ ಸವಾಲಾಗಿ ಪರಿಣಮಿಸಿದೆ. ಪ್ರಸ್ತುತ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸನ್ನಿವೇಶದಲ್ಲಿ ಸಹಕಾರ ಸಂಸ್ಥೆಗಳು ವೃತ್ತಿಪರತೆಯಿಂದ ಕಾರ್ಯನಿರ್ವಹಿಸದಿದ್ದರೇ ಉತ್ತಮ ಕಾರ್ಯನಿರ್ವಹಣೆಗೆ (Good Governance) ಸಾಧ್ಯವಿರುವುದಿಲ್ಲ. ಸಹಕಾರ ಕ್ಷೇತ್ರದ ಪ್ರತಿಯೊಂದು ವಲಯಕ್ಕೆ (Sector) ಸಂಬಂಧಿಸಿದಂತೆ ಸಿಬ್ಬಂದಿ ವರ್ಗಕ್ಕೆ ಮಾತ್ರವಲ್ಲದೆ ಆಡಳಿತ ಮಂಡಳಿ ನಿರ್ದೇಶಕರಿಗೆ ವೃತ್ತಿ ಪ್ರಾವಿಣ್ಯತೆ ಅತ್ಯವಶ್ಯಕವಾಗಿದೆ. ಈ ಒಂದು ಕೊರತೆಯಿಂದಲೂ ಸಹ ಬಹುಪಾಲು ಸಹಕಾರ ಸಂಸ್ಥೆಗಳು ರೋಗಗ್ರಸ್ತ ಹಾಗೂ ನಷ್ಟಕ್ಕೆ ಕಾರಣವಾಗಿ ಮುಚ್ಚಲ್ಪಟ್ಟಿವೆ. ಆದಕಾರಣ ಪ್ರಸ್ತುತ ಸಹಕಾರ ಕಾಯ್ದೆ ರೀತ್ಯಾ ಆಡಳಿತ ಮಂಡಳಿಗೆ ವೃತ್ತಿಪರ ನಿರ್ದೇಶಕರನ್ನು ಕಡ್ಡಾಯವಾಗಿ ಸೇರ್ಪಡೆಗೊಳಿಸಿಕೊಳ್ಳುವುದು ಹಾಗೂ ಸಹಕಾರ ಶಿಕ್ಷಣ ತರಬೇತಿ ಮತ್ತು ಮಾಹಿತಿ ವೃತ್ತಿ ಆಧಾರವಾಗಿರಬೇಕು ಸಿಬ್ಬಂದಿಗಳ ನೇಮಕಾತಿ, ವೇತನ, ಮುಂಬಡ್ತಿ, ಸ್ಥಳ ನಿಯುಕ್ತಿ, ವರ್ಗಾವಣೆ, ತರಬೇತಿ, ಪ್ರೇರಣೆಗಳಲ್ಲಿ ಗುಣಾತ್ಮಕ ಮತ್ತು ದಕ್ಷತೆಯಿಂದ ಕೂಡಿರುವ ಮಾನವ ಸಂಪನ್ಮೂಲ ನೀತಿಯನ್ನು ಅಳವಡಿಸಿಕೊಳ್ಳುವ ಜೊತೆಗೆ ಆಚರಣೆಯಲ್ಲಿ ತರುವುದು ಮಹತ್ವದಾಗಿದೆ.

ರಾಷ್ಟ್ರೀಯ ಸಹಕಾರ ನೀತಿ ಅನುಷ್ಠಾನದಲ್ಲಿರದಿರುವುದು ಸವಾಲಾಗಿ ಪರಿಣಮಿಸಿದೆ (No uptodated National co operative policy) 2002ರಲ್ಲಿ ರಾಷ್ಟ್ರೀಯ ಸಹಕಾರ ನೀತಿಯನ್ನು ರೂಪಿಸಿದ್ದು, ಸದರಿ ನೀತಿ ಅವಧಿ ಮೀರಿದುದಾಗಿದೆ (Out dated). ಈಗಿನ ಬದಲಾವಣೆ ಸನ್ನಿವೇಶ ಹಾಗೂ ಸಂದರ್ಭಕ್ಕೆ ಅನುಗುಣವಾಗಿರದ ಪ್ರಯುಕ್ತ ಪ್ರಯೋಜನವಿಲ್ಲದ್ದಾಗಿದೆ. ಕಾಲಕಾಲಕ್ಕೆ ಬದಲಾಗುತ್ತಿರುವ ಕೃಷಿ ನೀತಿ, ಕೈಗಾರಿಕಾ ನೀತಿ, ಶಿಕ್ಷಣ ನೀತಿ, ಶಿಕ್ಷಣ ನೀತಿ, ಆರ್ಥಿಕ ನೀತಿ ಹಾಗೂ ಯುವ ಸಮೂಹ ನೀತಿಗಳಿಗೆ ಅನುಗುಣವಾಗಿ ಹೊಸ ಸಮಗ್ರ ರಾಷ್ಟ್ರೀಯ ಸಹಕಾರ

ನೀತಿಯ ಅವಶ್ಯವಿದೆ. ಆದಕಾರಣ ಕ್ಷೇತ್ರದ ಎಲ್ಲಾ ವಲಯಗಳಿಗೆ ಅನ್ವಯಿಸುವಂತೆ ಸಮಗ್ರ ಪೂರ್ಣ ಪ್ರಮಾಣದ ಇಂದನಿಕರಿಸಿದ ರಾಷ್ಟ್ರೀಯ ಸಹಕಾರ ನೀತಿ ಸಹಕಾರ ಕ್ಷೇತ್ರದ ಸದೃಢತೆಗೆ ಪೂರಕವಾಗಿ ರೂಪಿಸಿ ಅನುಷ್ಠಾನಕ್ಕೆ ತಂದಲ್ಲಿ ಮಾತ್ರ ಸಹಕಾರ ಕ್ಷೇತ್ರದ ಸಮಸ್ಯೆಗಳ ಪರಿಹಾರಕ್ಕೆ ನಾಂದಿಯಾಗುತ್ತದೆ.

ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರದಲ್ಲಿನ ಕೊರತೆ ಸವಾಲಾಗಿ ಪರಿಣಮಿಸಿದೆ. ಪ್ರಸ್ತುತ ನಮ್ಮ ಮೂಲಭೂತ ಶಿಕ್ಷಣ ವ್ಯವಸ್ಥೆಯಲ್ಲಿ ಸಹಕಾರ ಶಿಕ್ಷಣವನ್ನು ಪರಿಚಯಿಸದಿರುವುದು ದೊಡ್ಡ ಸವಾಲಾಗಿರುತ್ತದೆ. ಸಹಕಾರ ಶಿಕ್ಷಣ, ತರಬೇತಿ ಮತ್ತು ಮಾಹಿತಿ ಬಗ್ಗೆ NCCT(National Council for co operative Training) NCUI(National Cooperative Union of India) Karnataka state co operative Federation, District level co op unions, Karnataka Institute of coop Management, RICM ಮುಂತಾದವುಗಳಲ್ಲಿ ವೃತ್ತಿಆಧಾರಿತ ಕೋರ್ಸ್‌ಗಳನ್ನು ಅಧ್ಯಯನಕ್ಕೆ ಒಳಪಡಿಸುವುದಲ್ಲದೇ, ಸಹಕಾರ ಶಿಕ್ಷಣ ತರಬೇತಿ ಮತ್ತು ಪ್ರಚಾರದಲ್ಲಿ ಅಮೂಲಾಗ್ರ ಸುಧಾರಣಾ ಕ್ರಮಗಳ ಅಗತ್ಯವಿದೆ. ಈ ಸಂಸ್ಥೆಗಳ ಆಡಳಿತ ಮಂಡಲಿಗಳು ಶೈಕ್ಷಣಿಕ ಪಾಂಡಿತ್ಯವುಳ್ಳ ಶಿಕ್ಷಣ ತಜ್ಞರನ್ನು ಹಾಗೂ ವಾಸ್ತವ ಅನುಭವಿಗಳನ್ನು (Academicians') ಪದನಿಮಿತ್ತ ನಿರ್ದೇಶಕರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆಗೊಳಿಸಿ ಹೆಚ್ಚಿನ ಮಾನ್ಯತೆ ನೀಡುವುದು ಸೂಕ್ತವಾಗಿದೆ.


ಸಹಕಾರ ಕ್ಷೇತ್ರದ ವಿವಿಧ ವಲಯಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ದಿಗೆ ಆದ್ಯತೆ ನೀಡದಿರುವುದು ಸವಾಲಾಗಿ ಪರಿಣಮಿಸಿದೆ. ಸಹಕಾರ ಕ್ಷೇತ್ರದಲ್ಲಿ ಹೊಸ ಅನ್ವೇಷನೆ, ಸಂಶೋಧನೆ ಮತ್ತು ಅಭಿವೃದ್ದಿ ಬಗ್ಗೆ ಇರುವ ಉದಾಸೀನತೆ ಮತ್ತು ನಿರ್ಲಕ್ಷ್ಯತೆ ಶಾಶ್ವತ ಸಮಸ್ಯೆಯಾಗಿದೆ. ಇಲಾಖಾ ಮಟ್ಟದಲ್ಲಿ ಸರ್ಕಾರದ ಹಂತದಲ್ಲಿ ವಿಶ್ವವಿದ್ಯಾಲಯಗಳಲ್ಲಿ ಸಹಕಾರ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲಿ ಹಾಗೂ ಸಹಕಾರ ಸಂಸ್ಥೆಗಳಲ್ಲಿ ಈ ನಿಟ್ಟಿನಲ್ಲಿ ಯಾವುದೇ ನಿರ್ದಿಷ್ಟ ಮತ್ತು ನಿರಂತರ ಕಾರ್ಯ ಮತ್ತ ಪ್ರಯೋಗಗಳು ಶೂನ್ಯವಾಗಿದೆ. ಇದರಿಂದ ಸಹಕಾರ ಕ್ಷೇತ್ರದ ಪ್ರಗತಿ ಮತ್ತು ಅಭಿವೃದ್ದಿ ಕುಂಠಿತವಾಗಿದೆ. ಈ ಬಗ್ಗೆ ಆಧುನಿಕತೆಗೆ ಅನುಗುಣವಾಗಿ ಸಂಶೋಧನಾ ಮತ್ತು ಅಭಿವೃದ್ದಿ ಪ್ರಯೋಗಗಳು ಚಾಲ್ತಿಯಲ್ಲಿರಿಸುವುದು ಅತ್ಯಂತ ಮಹತ್ವದಾಗಿದೆ.

ಸಹಕಾರ ರಂಗದಲ್ಲಿ ಗುಣಾತ್ಮಕ ಮತ್ತು ಬದ್ದತೆವುಳ್ಳ ಮುಖಂಡತ್ವದ ಕೊರತೆ ಮತ್ತೊಂದು ಸವಾಲಾಗಿದೆ. ಸಹಕಾರ ಸಂಸ್ಥೆಗಳ ಬಹುಪಾಲು ಎಲ್ಲರು ಅಲ್ಲ ಮುಖಂಡರು ಪ್ರಾಮಾಣಿಕ ಮತ್ತು ಬದ್ದತೆವುಳ್ಳವರಾಗಿರುವುದಿಲ್ಲ. ಮೇಲಾಗಿ ಅಧಿಕಾರ ಶಾಹಿಯು ಸಹ ಬಹುಪಾಲು ನಿರಾಸಕ್ತಿವುಳ್ಳವರಾಗಿರುತ್ತಾರೆ (Dishonest & Disinterest) ಕಾಣಬಹುದಾಗಿದೆ. ಸಂಸ್ಥೆಗಳಲ್ಲಿ ಅಧಿಕಾರ ದಾಹ, ಧನದಾಹ ಹಾಗೂ ಸ್ವಹಿತಾಸಕ್ತಿಗಳ ಕಾರಣ ಯಶಸ್ಸು ಮರಿಚಿಕೆಯಾಗಿದೆ. ಮೇಲಾಗಿ ಪದಾಧಿಕಾರಿಗಳಾಗಿರುವ ರಾಜಕೀಯ ಮುಖಂಡರು ಸಹಕಾರ ಸಂಸ್ಥೆಗಳ ಪದಾಧಿಕಾರಿಗಳ ಹುದ್ದೆಗಳಿಂದ ಅಂತರ ಕಾಯ್ದೆಕೊಳ್ಳುವುದು ಸೂಕ್ತವೆನಿಸುತ್ತದೆ. ಈ ಬಗ್ಗೆ ಸಹಕಾರ ಕಾಯ್ದೆಯ ತಿದ್ದುಪಡಿಗೆ ಚಿಂತನೆ ಅಗತ್ಯವಿದೆ.


ಬಹುಪಾಲು ಸಹಕಾರ ಸಂಸ್ಥೆಗಳು ಮೂಲಭೂತ ಸೌಲಭ್ಯಗಳು ಮತ್ತು ಮಾಹಿತಿ ಹಾಗೂ ತಂತ್ರಜ್ಞಾನದಿಂದ ವಂಚಿತವಾಗಿವೆ. ಪ್ರಸ್ತುತ ಪೈಪೋಟಿ ಸನ್ನಿವೇಶದಲ್ಲಿ ತಂತ್ರಜ್ಞಾನ ಮತ್ತು ಅಧುನಿಕತೆಯ ಕಾರ್ಯಪ್ರವೃತ್ತಿ ಅಗತ್ಯವಾಗಿದೆ. ಈ ಬಗ್ಗೆ ಸರ್ಕಾರ ಹಾಗೂ ಪೆಡರೇಷನ್‌ಗಳು ಸಂಯೋಜಿತ ಪ್ರಾಥಮಿಕ ಮತ್ತು ಮಧ್ಯಮಿಕ ಸಹಕಾರ ಸಂಸ್ಥೆಗಳಿಗೆ ಸಹಾಯ ಹಸ್ತ ನೀಡುವುದು ಅಗತ್ಯವಿದೆ. ರಾಷ್ಟ್ರೀಯ ಹಾಗೂ ರಾಜ್ಯ ಅಪೆಕ್ಸ್ ಸಹಕಾರ ಸಂಸ್ಥೆಗಳು ಕೆಳಹಂತದ ಸಂಸ್ಥೆಗಳಿಂದ ಪ್ರತಿನಿಧಿಗಳನ್ನು ಚುನಾವಣೆಗೆ ಬರಮಾಡಿಕೊಳ್ಳಲು ಮಾತ್ರ ಸೀಮಿತಗೊಳಿಸದೇ ಅವುಗಳ ಆರ್ಥಿಕ ಹಾಗೂ ತಾಂತ್ರಿಕ ಚಟುವಟಿಕೆಗಳ ಸದೃಢತೆಗೆ ಮತ್ತು ವಿಸ್ತರಣೆಗೆ ನಿಗದಿತ ಯೋಜನೆ ಮತ್ತು ಸಹಾಯ ನೀಡುವುದು ಅವಶ್ಯವಾಗಿದೆ. ಸಹಕಾರಿಗಳಲ್ಲಿ ಪರಸ್ಪರ (Cooperation among cooperatives) ಸಹಕಾರ ತತ್ವ ವಾಸ್ತವವಾಗಿ ಅನುಷ್ಠಾನಗೋಲಿಸುವುದು ಆದ್ಯತೆಯಾಗಿದೆ.

ಸಹಕಾರ ಆಂದೋಲನಾ ಯಶಸ್ವಿಯಾಗಬೇಕಾದರೇ "Sahakara se samruddhi" (Prosperity and progress through cooperatives) ಧ್ಯೇಯವಾಗಬೇಕು. ಮೇಲಾಗಿ ದೇಶದ ಆರ್ಥಿಕ ಚಟುವಟಿಕೆಗಳು ಬಹುಪಾಲು" ಸಹಕಾರ ಆಧಾರಿತ ಆರ್ಥಿಕ ವ್ಯವಸ್ಥೆಯಾಗಬೇಕು" (Cooperative based Economy) ಆದಲ್ಲಿ ಮಾತ್ರ ಸಹಕಾರ ಕ್ಷೇತ್ರದ ಯಶಸ್ಸು ಮತ್ತು ಸಧೃಢವಾಗಲಿದೆ.

## ಆಯ್ಕೆ



ಸಹಕಾರ ಮಹಾಮಂಡಳ ಮತ್ತು ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ಶೇಖರ ಗೌಡ ಮಾಲಿಪಾಟೀಲರವರು ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಆಡಳಿತಮಂಡಳಿ ಚುನಾವಣೆಯಲ್ಲಿ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ. ದೇವೇಗೌಡರು ಹಾಗೂ ಆಡಳಿತಮಂಡಳಿ ನಿರ್ದೇಶಕರುಗಳು ಶ್ರೀಯುತರನ್ನು ಅಭಿನಂದಿಸಿದ್ದಾರೆ.



# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

▸▸ **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು.

.........ಹಿಂದಿನ ಸಂಚಿಕೆಯಿಂದ

### ಪ್ರಾಥಮಿಕ ಕೃಷಿ ಪತ್ತಿ ಸಹಕಾರ ಸಂಘಗಳು (Primary Agricultural Credit Cooperative Societies- P.A.C.S- ಪ್ಯಾಕ್ಸ್‌ಗಳು)

ಭಾರತ ದೇಶದಲ್ಲಿ ಗ್ರಾಮೀಣ ಭಾಗದಲ್ಲಿ ಲೇವಾದೇವಿದಾರರಿಂದ ಬಡ ರೈತರಿಗೆ ಆಗುತ್ತಿದ್ದ ಶೋಷಣೆಯನ್ನು ತಪ್ಪಿಸಲು ಸಹಕಾರ ಸಂಘಗಳ ಮೂಲಕ ಕೃಷಿ ಸಾಲಗಳನ್ನು ನೀಡಬೇಕೆಂಬ ಉದ್ದೇಶದಿಂದ ಸಹಕಾರ ಚಳುವಳಿಗೆ ಪ್ರೋತ್ಸಾಹ ನೀಡಲಾಯಿತು. ಅದರಂತೆ 1904ರಲ್ಲಿ ಸಹಕಾರ ಪತ್ತಿನ ಸಂಘಗಳ ಕಾಯ್ದೆಯನ್ನು ಜಾರಿಗೆ ತರಲಾಯಿತು. ಮೊದಲ ಕೃಷಿ ಪತ್ತಿನ ಸಹಕಾರ ಸಂಘವನ್ನು ಗದಗ ಜಿಲ್ಲೆಯ "ಕಣಗಿನಹಾಳ" ಎಂಬಲ್ಲಿ ತಾ॥ 09–05–1905ರಲ್ಲಿ ಶ್ರೀ ಶಿದ್ದನಗೌಡ ಸಂಣರಾಮನಗೌಡ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಸ್ಥಾಪನೆಯಾಯಿತು.

ಸಾಮಾನ್ಯವಾಗಿ ಪ್ರಾಥಮಿಕ ಕೃಷಿ ಪತ್ತಿನ ಸಂಘವು ಗ್ರಾಮ ಪಂಚಾಯಿತಿಗೆ ಒಂದರಂತೆ ಇರುತ್ತದೆ. ಸಂಘದ ವ್ಯಾಪ್ತಿಯಲ್ಲಿ ಸುಮಾರು 5–6 ಹಳ್ಳಿಗಳು ಸೇರಿರುತ್ತವೆ. ಸಂಘದ ವ್ಯಾಪ್ತಿಯಲ್ಲಿನ ಕೃಷಿಕರು ಮತ್ತು ಇತರರು ಸಂಘದ ಬೈಲಾ ನಿಯಮದ ಪ್ರಕಾರ ಕನಿಷ್ಠ ಒಂದು ಷೇರು ಮೊಬಲಗನ್ನು ಪಾವತಿಸಿ ಸದಸ್ಯತ್ವ ಪಡೆದುಕೊಂಡಿರುತ್ತಾರೆ. ಸಂಘದ ದುಡಿಯುವ ಬಂಡವಾಳವು ಸದಸ್ಯರಿಂದ ಪಾವತಿಸಲಾದ ಷೇರು ಧನ, ಸ್ವಂತ ನಿಧಿಗಳು, ಠೇವಣಿ ಜಿಲ್ಲಾ ಬ್ಯಾಂಕಿನಿಂದ ತರುವಂತ ಸಾಲಗಳು ಸೇರಿರುತ್ತವೆ.

ಈ ಸಂಘಗಳು ಕೃಷಿಕರಿಗೆ ಅಲ್ಪಾವಧಿ ಮತ್ತು ಮದ್ಯಮಾವಧಿ ಸಾಲಗಳನ್ನು ನೀಡುತ್ತವೆ. ವ್ಯವಸಾಯಕ್ಕೆ ಬೇಕಾದ ರಾಸಾಯನಿಕ ಗೊಬ್ಬರ, ಬೀಜ, ಸಲಕರಣೆ ಇತ್ಯಾದಿಗಳನ್ನು ಒದಗಿಸುತ್ತವೆ. ಅಲ್ಲದೆ, ದಿನಬಳಕೆ ವಸ್ತುಗಳನ್ನು ಮಾರಾಟ ಮಾಡುತ್ತವೆ. ಸದಸ್ಯರಲ್ಲಿ ಉಳಿತಾಯ ಮನೋಭಾವನೆಯನ್ನು ಪ್ರೋತ್ಸಾಹಿಸುತ್ತವೆ ಸ್ವಸಹಾಯ ಗುಂಪುಗಳನ್ನು ಪ್ರೋತ್ಸಾಹಿಸಿ ಅಗತ್ಯ ಸಾಲಗಳನ್ನು ಒದಗಿಸುತ್ತವೆ. ಒಟ್ಟಾರೆ, ಗ್ರಾಮೀಣ ಭಾಗದ ಎಲ್ಲರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಪೂರಕವಾದ ಕಾರ್ಯಗಳನ್ನು ಕೈಗೊಳ್ಳುತ್ತವೆ.

ಸಹಕಾರ ಕಾಯ್ದೆ ಮತ್ತು ಸಂಘದ ಬೈಲಾ ನಿಯಮದ ಪ್ರಕಾರ ಸದಸ್ಯರು ಆಡಳಿತ ಮಂಡಳಿಯ ಸದಸ್ಯರನ್ನು ಚುನಾಯಿಸುತ್ತಾರೆ ಹಾಗೂ ಈ ಆಡಳಿತ ಮಂಡಳಿಯು ತಮ್ಮೊಳಗಿನಿಂದ ಅಧ್ಯಕ್ಷರು, ಉಪಾಧ್ಯಕ್ಷರನ್ನು ಆಯ್ಕೆ ಮಾಡುತ್ತಾರೆ. ಈ ಆಡಳಿತ ಮಂಡಳಿಯು ಸಂಘದ ಆಡಳಿತವನ್ನು ನಿರ್ವಹಿಸುತ್ತದೆ. ಆಡಳಿತ ಮಂಡಳಿಯಿಂದ ನೇಮಕಗೊಂಡ ಕಾರ್ಯನಿರ್ವಾಹಕ ಮತ್ತು ಸಿಬ್ಬಂದಿಯು ಸಂಘದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಪ್ರಸ್ತುತ ಆಡಳಿತ ಮಂಡಳಿ ಸದಸ್ಯರ ಹಾಗೂ ಪದಾಧಿಕಾರಿಗಳ ಅವಧಿಯು ಐದು ವರ್ಷಗಳಾಗಿರುತ್ತದೆ.

### ರೈತ ಸೇವಾ ಸಹಕಾರ ಸಂಘಗಳು (Farmer's Service Cooperative Societies – F.S.C.S )

ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ಸಣ್ಣ ಸಂಸ್ಥೆಗಳು ಆಗಿರುವುದರಿಂದ ದೊಡ್ಡ ಪ್ರಮಾಣದ ಸಂಘಗಳನ್ನು ಸ್ಥಾಪಿಸಿ ಅವುಗಳ ಮೂಲಕ ಕೃಷಿಕರ ತಾಂತ್ರಿಕ ಬೇಡಿಕೆಗಳನ್ನು ಒಳಗೊಂಡಂತೆ ಎಲ್ಲಾ ಬೇಡಿಕೆಗಳನ್ನು ಪರಿಣಾಮಕಾರಿಯಾಗಿ ಒದಗಿಸಬೇಕೆಂಬ ಉದ್ದೇಶದಿಂದ 1976–77ರಲ್ಲಿ ಸ್ಥಾಪಿಸಲಾಗಿರುತ್ತದೆ. ಇದೇ ಉದ್ದೇಶದಿಂದ ರೇಷ್ಮೆ ಬೆಳೆಗಾರರ ಪ್ರದೇಶದಲ್ಲಿ ರೇಷ್ಮೆ ಬೆಳೆಗಾರರ ಸೇವಾ ಸಹಕಾರ ಸಂಘಗಳನ್ನು (Sericulture Farmer's Service Cooperative Societies – S.F.S.C.S) ಇದೇ ಸಮಯದಲ್ಲಿ ಸ್ಥಾಪಿಸಲಾಯಿತು. ಇವುಗಳನ್ನು ಕೆಲವು ಆಯ್ದ ಸ್ಥಳಗಳಲ್ಲಿ ಹಾಗೂ ಹಾಲಿ ಇದ್ದಂತ ಸಂಘಗಳ ಸಂಯೋಜನೆ ಮೂಲಕ ಸ್ಥಾಪಿಸಿದ್ದು, ಇವುಗಳು ಸಹ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳೇ ಆಗಿರುತ್ತದೆ. ಈ ಸಂಘಗಳ ದುಡಿಯುವ ಬಂಡವಾಳವು ಸದಸ್ಯರಿಂದ ಪಾವತಿಸಲಾದ ಷೇರು ಧನ, ಸ್ವಂತ ನಿಧಿಗಳು, ಠೇವಣಿ ಜಿಲ್ಲಾ ಬ್ಯಾಂಕಿನಿಂದ ತರುವಂತ ಸಾಲಗಳು ಸೇರಿರುತ್ತವೆ.

ಸಹಕಾರ ಕಾಯ್ದೆ ಮತ್ತು ಸಂಘದ ಬೈಲಾ ನಿಯಮದ ಪ್ರಕಾರ ಸದಸ್ಯರು ಆಡಳಿತ ಮಂಡಳಿಯ ಸದಸ್ಯರನ್ನು ಚುನಾಯಿಸುತ್ತಾರೆ ಹಾಗೂ ಈ ಆಡಳಿತ ಮಂಡಳಿಯು ತಮ್ಮೊಳಗಿನಿಂದ ಅಧ್ಯಕ್ಷರು, ಉಪಾಧ್ಯಕ್ಷರನ್ನು ಆಯ್ಕೆ ಮಾಡುತ್ತಾರೆ. ಈ ಆಡಳಿತ ಮಂಡಳಿಯು ಸಂಘದ ಆಡಳಿತವನ್ನು ನಿರ್ವಹಿಸುತ್ತದೆ. ಕಾರ್ಯ ನಿರ್ವಾಹಕ ಮತ್ತು ಸಿಬ್ಬಂದಿಯು ಸಂಘದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಪ್ರಸ್ತುತ ಆಡಳಿತ ಮಂಡಳಿ ಸದಸ್ಯರ ಹಾಗೂ ಪದಾಧಿಕಾರಿಗಳ ಅವಧಿಯು ಐದು ವರ್ಷಗಳಾಗಿರುತ್ತದೆ.

### ಗಿರಿಜನ ದೊಡ್ಡ ಪ್ರಮಾಣದ ವಿವಿದ್ದೋದ್ದೇಶ ಸಹಕಾರ ಸಂಘಗಳು (Large-Sized Adivasis Multipurpose Societies - LAMPS)

ಅರಣ್ಯ ಪ್ರದೇಶದಲ್ಲಿ ವಾಸಿಸುವ ಹಿಂದುಳಿದ ಪಂಗಡಕ್ಕೆ ಸೇರಿದ ಗಿರಿಜನರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಅರಣ್ಯ ಕಾರ್ಮಿಕ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿತ್ತು. ಇವುಗಳನ್ನು 1977ರಲ್ಲಿ "ಗಿರಿಜನ ದೊಡ್ಡ ಪ್ರಮಾಣದ ವಿವದ್ದೋದ್ದೇಶ ಸಹಕಾರ ಸಂಘಗಳು" ಎಂಬುದಾಗಿ ಪರಿವರ್ತಿಸಲಾಯಿತು. ಗಿರಿಜನರು ಜಾಸ್ತಿ ಇರುವಂತಹ ಸ್ಥಳಗಳಲ್ಲಿ ಇವುಗಳನ್ನು ಸ್ಥಾಪಿಸಲಾಗಿದೆ. ಮೈಸೂರು,

ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಈ ಜಿಲ್ಲೆಗಳಲ್ಲಿ ಸ್ಥಾಪಿಸಿದ್ದು, ಪ್ರಸ್ತುತ 22 ಸಂಘಗಳಿರುತ್ತವೆ.

ಕಿರು ಅರಣ್ಯ ಉತ್ಪತ್ತಿಯನ್ನು ಸದಸ್ಯರ ಮೂಲಕ ಸಂಗ್ರಹಿಸಿ ಅವರಿಗೆ ಸೂಕ್ತ ಬೆಲೆ ನೀಡುವುದು, ಕೃಷಿ ಕೈಗೊಂಡವರಿಗೆ ಕೃಷಿ ಸಾಲಗಳನ್ನು ಮತ್ತು ಇತರರಿಗೆ ಅಗತ್ಯ ಸಾಲಗಳನ್ನು ಒದಗಿಸುವುದು, ಸದಸ್ಯರಿಗೆ ಬೇಕಾದ ಅಗತ್ಯ ಗ್ರಾಹಕ ವಸ್ತುಗಳನ್ನು ಮಾರಾಟ ಮಾಡುವುದು, ಅರಣ್ಯ ಕೆಲಸಗಳನ್ನು ಗುತ್ತಿಗೆ ಪಡೆದು ಸದಸ್ಯರಿಗೆ ಉದ್ಯೋಗ ಒದಗಿಸುವುದು, ಇತ್ಯಾದಿ ಉದ್ದೇಶಗಳಿದ್ದು ಕಾರ್ಯನಿರ್ವಹಿಸುತ್ತಿದೆ.

ಈ ಸಂಘಗಳ ದುಡಿಯುವ ಬಂಡವಾಳವು ಸದಸ್ಯರಿಂದ ಪಾವತಿಸಲಾದ ಷೇರು ಧನ, ಸ್ವಂತ ನಿಧಿಗಳು, ಠೇವಣಿ ಜಿಲ್ಲಾ ಬ್ಯಾಂಕಿನಿಂದ ತರುವಂತ ಸಾಲಗಳು ಸೇರಿರುತ್ತವೆ.

ಸಹಕಾರ ಕಾಯ್ದೆ ಮತ್ತು ಸಂಘದ ಬೈಲಾ ನಿಯಮದ ಪ್ರಕಾರ ಸದಸ್ಯರು ಆಡಳಿತ ಮಂಡಳಿಯ ಸದಸ್ಯರನ್ನು ಚುನಾಯಿಸುತ್ತಾರೆ ಹಾಗೂ ಈ ಆಡಳಿತ ಮಂಡಳಿಯು ತಮ್ಮೊಳಿಗಿನಿಂದ ಅಧ್ಯಕ್ಷರು, ಉಪಾಧ್ಯಕ್ಷರನ್ನು ಆಯ್ಕೆ ಮಾಡುತ್ತಾರೆ. ಈ ಆಡಳಿತ ಮಂಡಳಿಯು ಸಂಘದ ಆಡಳಿತವನ್ನು ನಿರ್ವಹಿಸುತ್ತದೆ. ಕಾರ್ಯ ನಿರ್ವಾಹಕ ಮತ್ತು ಸಿಬ್ಬಂದಿಯು ಸಂಘದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಪ್ರಸ್ತುತ ಆಡಳಿತ ಮಂಡಳಿ ಸದಸ್ಯರ ಹಾಗೂ ಪದಾಧಿಕಾರಿಗಳ ಅವಧಿಯು ಐದು ವರ್ಷಗಳಾಗಿರುತ್ತದೆ.

### ವ್ಯಾಪಾರಭಿವೃದ್ಧಿ ಯೋಜನೆ
### (Business Development Plan - BDP)

ಪ್ರಾಥಮಿಕ ಕೃಷಿ ಪತ್ತಿನ ಸಂಘವು ತನ್ನ ಸರ್ವತೋಮುಖ ಅಭಿವೃದ್ಧಿ ಸಾಧನೆಗಾಗಿ ವಾರ್ಷಿಕ ಸಾಧಿಸಬೇಕಾದ ಎಲ್ಲಾ ಅಂಶಗಳನ್ನು ಒಳಗೊಂಡ ಯೋಜನೆಯನ್ನು ಸಿದ್ದಪಡಿಸಿ ಜಿಲ್ಲಾ ಬ್ಯಾಂಕ್ ಒಡನೆ ಒಡಂಬಡಿಕೆ ಮಾಡಿಕೊಂಡು ಅನುಷ್ಠಾನ ಮಾಡಬೇಕಾದ ಯೋಜನೆಯನ್ನು ವ್ಯಾಪಾರಭಿವೃದ್ಧಿ ಯೋಜನೆ – BDP ಎಂದು ಕರೆಯಲಾಗುತ್ತದೆ. ಸಂಪನ್ಮೂಲ ವೃದ್ಧಿ, ಸದಸ್ಯತ್ವ ಹೆಚ್ಚಿಸುವುದು, ಕೃಷಿ–ಕೃಷಿಯೇತರ ಸಾಲ ನೀಡಿಕೆ, ಕೃಷಿ ಪರಿಕರಗಳ ಮಾರಾಟ, ದಿನಬಳಕೆ ವಸ್ತುಗಳ ಮಾರಾಟ, ಸಾಲ ವಸೂಲಾತಿ, ನಿಧಿಯೇತರ (Non-Fund) ವ್ಯವಹಾರಗಳು, ಲಾಭಗಳಿಕೆ, ಇತ್ಯಾದಿ ಅಂಶಗಳ ಬಗ್ಗೆ ವಾರ್ಷಿಕ ಗುರಿಯನ್ನು ನಿಗಧಿಪಡಿಸಿ ಸಾಧನೆ ಮಾಡುವುದು ಯೋಜನೆಯ ಧ್ಯೇಯವಾಗಿರುತ್ತದೆ.

### ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು
### (District Co-operative Central Banks – D.C.C. Banks)

ಸಾಮಾನ್ಯವಾಗಿ ಈ ಬ್ಯಾಂಕ್‌ಗಳ ಕಾರ್ಯವ್ಯಾಪ್ತಿಯು ಜಿಲ್ಲೆಯಾಗಿರುತ್ತದೆ. ಆದರೆ ಮೈಸೂರು, ದಕ್ಷಣ ಕನ್ನಡ, ಬೆಂಗಳೂರು, ಕೋಲಾರ, ದಾರವಾಡ, ರಾಯಚೂರು ಮತ್ತು ಗುಲ್ಬರ್ಗ ಬ್ಯಾಂಕುಗಳ ಕಾರ್ಯವ್ಯಾಪ್ತಿಯು 2/3 ಜಿಲ್ಲೆಗಳ ವ್ಯಾಪ್ತಿ ಇರುತ್ತದೆ. ಒಂದು ಜಿಲ್ಲೆಗೆ ಒಂದು ಜಿಲ್ಲಾ ಬ್ಯಾಂಕ್ ಇರುಬೇಕೆಂಬ ನೀತಿ ಇದ್ದರು ಆರ್ಥಿಕ ಸಾಧ್ಯತೆ ಇಲ್ಲವೆಂಬ ಕಾರಣದಿಂದ ಅವುಗಳನ್ನು ಹಾಗೆಯೇ ಮುಂದುವರೆಸಲಾಗಿದೆ. ಇದು ಜಿಲ್ಲಾ ಮಟ್ಟದಲ್ಲಿ ಸಹಕಾರ ಹಣಕಾಸು ಸಂಸ್ಥೆಯಾಗಿರುತ್ತದೆ. ವ್ಯಾಪ್ತಿಯಲ್ಲಿರುವ ಪಿ.ಎ.ಸಿ.ಎಸ್‌ಗಳು ಹಾಗೂ ಇತರೆ ಅನೇಕ ಸಹಕಾರ ಸಂಘಗಳು ಈ ಬ್ಯಾಂಕುಗಳಲ್ಲಿ ಸದಸ್ಯತ್ವ ಪಡೆದಿರುತ್ತದೆ. ಇವುಗಳ ದುಡಿಯುವ ಬಂಡವಾಳವು ಸದಸ್ಯರಿಂದ ಪಾವತಿಸಲ್ಪಟ್ಟ ಷೇರು ಧನ, ಸ್ವಂತ ನಿಧಿಗಳು, ಠೇವಣಿ ಹಾಗೂ ಅಪೆಕ್ಸ್ ಬ್ಯಾಂಕಿನಿಂದ ತರುವಂತಹ ಸಾಲಗಳು ಸೇರಿರುತ್ತವೆ. ರೈತರಿಗೆ ಕೃಷಿ ಸಾಲಗಳನ್ನು ಪಿ.ಎ.ಸಿ.ಎಸ್‌ಗಳ ಮೂಲ ನೀಡುವುದು, ಗ್ರಾಮೀಣಾಭಿವೃದ್ಧಿ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಬ್ಯಾಂಕಿಂಗ್ ಸೌಕರ್ಯಗಳನ್ನು ಒದಗಿಸುವುದು ಮುಖ್ಯ ಉದ್ದೇಶವಾಗಿರುತ್ತದೆ.

ಈ ಬ್ಯಾಂಕುಗಳು ಅಲ್ಪಾವಧಿ ಅಂದರೆ, ಬೆಳೆ ಸಾಲ ಹಾಗೂ ಮಧ್ಯಮಾವಧಿಯ ಹೈನುಗಾರಿಕೆ, ನೀರಾವರಿ, ಪಂಪ್‌ಸೆಟ್ ಇತ್ಯಾದಿ ಕೃಷಿಪೂರಕ ಸಾಲಗಳನ್ನು ನೀಡುತ್ತವೆ. ವೇತನ ಆಧರಿತ, ಗೃಹ ನಿರ್ಮಾಣ, ನಿವೇಶನ ಖರೀದಿ, ಗಿರವಿ, ಕೈಗಾರಿಕೆ, ವಿದ್ಯಾಭ್ಯಾಸ ಇತ್ಯಾದಿ ಕೃಷಿಯೇತರ ಸಾಲಗಳನ್ನು ನೀಡುತ್ತವೆ. ಆರ್.ಬಿ.ಐ ನಿಂದ ಅನುಮತಿ ಪಡೆದು ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುತ್ತವೆ. ಸ್ವಸಹಾಯ ಗುಂಪುಗಳ ರಚನೆಯನ್ನು (Self Help Groups–S.H.Gs) ಪ್ರೋತ್ಸಾಹಿಸಿ ಅಗತ್ಯ ಸಾಲಗಳನ್ನು ಒದಗಿಸುತ್ತವೆ. ಜೊತೆಗೆ ಜಂಟಿ ಬಾಧ್ಯತಾ ಗುಂಪುಗಳ ರಚನೆಯನ್ನು (ಎಖಟಿಣ ಐಚಿಛಿಟಿಣಥಿ ಉಡಿಂಣಠಿ) ಪ್ರೋತ್ಸಾಹಿಸಿ ಸಾಲಗಳನ್ನು ನೀಡುತ್ತವೆ. ಈ ಬ್ಯಾಂಕುಗಳು ಫ್ಯಾಕ್ಸ್‌ಗಳ ಮೇಲ್ವಿಚಾರಣೆಯನ್ನು ನಿರ್ವಹಿಸುವುದರ ಜೊತೆಗೆ ಅಗತ್ಯ ಮಾರ್ಗದರ್ಶನಗಳನ್ನು ನೀಡುತ್ತವೆ. ಜಿಲ್ಲೆಯಲ್ಲಿ ಶಾಖೆಗಳನ್ನು ಹೊಂದಿದ್ದು ಅವುಗಳ ಮೂಲಕ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸುತ್ತವೆ.

ಸಹಕಾರ ಕಾಯ್ದೆ ಮತ್ತು ಬೈಲಾ ನಿಯಮಗಳ ಪ್ರಕಾರ ಸದಸ್ಯ ಸಂಘಗಳಿಂದ ಚುನಾಯಿತವಾದ ಆಡಳಿತ ಮಂಡಳಿ ಹಾಗೂ ಈ ಆಡಳಿತ ಮಂಡಳಿಯ ಸದಸ್ಯರೊಳಗೆ ಚುನಾಯಿತವಾದ ಪದಾಧಿಕಾರಿಗಳಾ ಅಧ್ಯಕ್ಷರು, ಉಪಾಧ್ಯಕ್ಷರು ಬ್ಯಾಂಕಿನ ಆಡಳಿತವನ್ನು ನಿರ್ವಹಿಸುತ್ತಾರೆ. ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಇತರೆ ಅಧಿಕಾರಿ ಸಿಬ್ಬಂದಿಗಳು ಬ್ಯಾಂಕಿನ ಕೆಲಸಗಳನ್ನು ನಿರ್ವಹಿಸುತ್ತಾರೆ. ಪ್ರಸ್ತುತ ಆಡಳಿತ ಮಂಡಳಿ ಸದಸ್ಯರ ಹಾಗೂ ಪದಾಧಿಕಾರಿಗಳ ಅವಧಿಯು ಐದು ವರ್ಷಗಳಾಗಿರುತ್ತದೆ.

ಅಪೆಕ್ಸ್ ಬ್ಯಾಂಕ್ ಹಣಕಾಸು ಸಂಸ್ಥೆಯಾಗಿ ಜಿಲ್ಲಾ ಬ್ಯಾಂಕುಗಳ ಮೇಲ್ವಿಚಾರಣೆಯನ್ನು ನಡೆಸುವುದರ ಜೊತೆಗೆ ಅಗತ್ಯ ಮಾರ್ಗದರ್ಶನಗಳನ್ನು ನೀಡುತ್ತದೆ. ನಬಾರ್ಡ್ ಈ ಬ್ಯಾಂಕುಗಳ ತನಿಖೆಯನ್ನು ಕಾಲಕಾಲಕ್ಕೆ ನಡೆಸಿ ಲೋಪದೋಷಗಳು ಇದ್ದಲ್ಲಿ ಸರಿಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಸೂಚನೆಗಳನ್ನು ನೀಡುತ್ತದೆ. ಪ್ರಸ್ತುತ ರಾಜ್ಯದಲ್ಲಿ 21 ಜಿಲ್ಲಾ ಬ್ಯಾಂಕುಗಳು ಇರುತ್ತವೆ.

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ಭಾರತದ ಸಂವಿಧಾನದ ಭಾಗ IXB ............... ಸಂಬಂಧಿಸಿರುತ್ತದೆ.**

ಎ) ಪಂಚಾಯಿತ್ ರಾಜ್ಯ ಸಂಸ್ಥೆಗಳು

ಬಿ) ನಗರ – ಪುರಸಭೆಗಳು

ಸಿ) ಸಹಕಾರ ಸಂಘಗಳು

ಡಿ) ಸಂಘ ಸಂಸ್ಥೆಗಳು

**2. ಸಹಕಾರ ಸಂಘಗಳಲ್ಲಿ ಪದಾಧಿಕಾರಿಗಳು ಎಂದರೆ ........................**

ಎ) ಅಧ್ಯಕ್ಷರು

ಬಿ) ಉಪಾಧ್ಯಕ್ಷರು

ಸಿ) ಕಾರ್ಯದರ್ಶಿ ಅಥವಾ ಖಜಾಂಚಿ

ಡಿ) ಅಧ್ಯಕ್ಷರು, ಉಪಾಧ್ಯಕರು, ಕಾರ್ಯದರ್ಶಿ ಮತ್ತು ಖಜಾಂಚಿ

**3. ಪದಾಧಿಕಾರಿಗಳ ಅಧಿಕಾರಾವಧಿ**

ಎ) ಆರು ವರ್ಷಗಳು

ಬಿ) ಮೂರು ವರ್ಷಗಳು

ಸಿ) ಐದು ವರ್ಷಗಳು

ಡಿ) ಎರಡುವರೆ ವರ್ಷಗಳು

**4. ಸಹಕಾರ ಸಂಘದ ಆಡಳಿತಮಂಡಲಿಗೆ ವೃತ್ತಿಪರ ನಿರ್ದೇಶಕರನ್ನು ಕೋ–ಆಪ್ಟ್ ಮಾಡಿಕೊಳ್ಳುವುದು ................**

ಎ) ಆಡಳಿತ ಮಂಡಳಿಯ ಐಚ್ಛಿಕ

ಬಿ) ಕಾಯ್ದೆಯಡಿ ಕಡ್ಡಾಯ

ಸಿ) 97ನೇ ಸಂವಿಧಾನ ತಿದ್ದುಪಡಿಯಲ್ಲಿ ಅವಕಾಶವಿರುವುದಿಲ್ಲ

ಡಿ) ರಾಜ್ಯ ಸರ್ಕಾರದ ವಿವೇಚನೆ

**5. ಆಡಳಿತಮಂಡಲಿಯಲ್ಲಿನ ಖಾಲಿ ಬಿದ್ದ ಆಕಸ್ಮಿಕ ನಿರ್ದೇಶಕರ ಸ್ಥಾನವನ್ನು ಭರ್ತಿ ಮಾಡಲು ಕಾಲಾವಕಾಶವನ್ನು ಕಾಯ್ದೆಯಲ್ಲಿ ನಿಗದಿಪಡಿಸಿರುವುದು ....................**

ಎ) ಎರಡು ತಿಂಗಳು

ಬಿ) ಮೂರು ತಿಂಗಳು

ಸಿ) ಆರು ತಿಂಗಳು

ಡಿ) ಒಂದು ವರ್ಷ

**6. ಆಡಳಿತ ಮಂಡಲಿಯಲ್ಲಿ ವೃತ್ತಿಪರ ನಿರ್ದೇಶಕರ ಸಂಖ್ಯೆ .................... ಮೀರಬಾರದು**

ಎ) ಮೂರು

ಬಿ) ಐದು

ಸಿ) ಎರಡು

ಡಿ) ನಾಲ್ಕು

**7. ಸಹಕಾರ ಸಂಘದ ಆಡಳಿತ ಮಂಡಲಿಯಲ್ಲಿ ಮಹಿಳೆಯರಿಗೆ ಮೀಲಿಡಬೇಕಾದ ಸ್ಥಾನಗಳು ..................**

ಎ) ಮೂರು ಬಿ) ಎರಡು

ಸಿ) ಒಂದು ಡಿ) ನಾಲ್ಕು

**8. ಸಹಕಾರ ಸಂಘಗಳ ಚುನಾವಣೆಗಳು ........... ರವರ ಮೇಲ್ವಿಚಾರಣೆ, ನಿರ್ದೇಶನ ಮತ್ತು ಮಾರ್ಗದರ್ಶನದಲ್ಲಿ ನಡೆಯುತ್ತವೆ.**

ಎ) ನಿಬಂಧಕರು

ಬಿ) ರಾಜ್ಯ ಚುನಾವಣಾ ಆಯೋಗ

ಸಿ) ಭಾರತದ ಚುನಾವಣಾ ಆಯೋಗ

ಡಿ) ಸಹಕಾರ ಚುನಾವಣಾ ಆಯೋಗ

**9. ಸಹಕಾರ ಸಂಘಗಳಲ್ಲಿ ಮತದಾರರ ಸಂಖ್ಯೆಯನ್ನು ಪರಿಶೀಲಿಸುವ ಅಧಿಕಾರ ................ ರವರಲ್ಲಿ ದತ್ತವಾಗಿದೆ.**

ಎ) ಆಡಳಿತ ಮಂಡಲಿ

ಬಿ) ಅಧ್ಯಕ್ಷರು

ಸಿ) ಮುಖ್ಯ ಕಾರ್ಯನಿರ್ವಾಹಕ

ಡಿ) ಸಹಕಾರ ಚುನಾವಣಾ ಪ್ರಾಧಿಕಾರ

**10. ಸಹಕಾರ ಸಂಘಗಳಲ್ಲಿ ಶಾಸನಬದ್ಧ ಆಡಿಟ್ ರವರನ್ನು ನೇಮಿಸಿಕೊಳ್ಳುವ ಅಧಿಕಾರ ........................ ದತ್ತವಾಗಿದೆ.**

ಎ) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು

ಬಿ) ನಿಬಂಧಕರು

ಸಿ) ಸರ್ವ ಸದಸ್ಯರ ಸಭೆ

ಡಿ) ಆಡಳಿತ ಮಂಡಲಿ

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

1 -D , 2 -C , 3 –C , 4 –B , 5 – B, 6 – C, 7 – D, 8 – C, 9 –D , 10 – C